ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8   ಸಂಚಿಕೆ 49   ಡಿಸೆಂಬರ್ 7, 1986   ಬೆಲೆ 80 ಪೈಸೆ

ಒಳಗೇನಿದೆ?....

ಮುಂದಿನ ಸಂಚಿಕೆಯಲ್ಲಿ

* ಜಿಲ್ಲಾ ಪರಿಷತ್ ಚುನಾವಣೆ ಸಿ.ಪಿ.ಐ (ಎಂ) ಪ್ರಣಾಳಿಕೆ.

ಅಖಿಲ ಭಾರತ ಪ್ಲಾಂಟೇಶನ್ ವರ್ಕರ್ಸ್ ಫೆಡರೇಷನಿನ ಕರೆ

ಭಾವೈಕ್ಯತೆ ಕಾಪಾಡಲು ಹೋರಾಡಿರಿ

ಇತ್ತೀಚೆಗೆ ಕೊಡಗು ಜಿಲ್ಲೆಯಲ್ಲಿ ಅದರಲ್ಲೂ ವಿರಾಜಪೇಟೆ ಮತ್ತು ಅದರ ಸುತ್ತ ಮುತ್ತ ಉಂಟಾಗಿರುವ ಭಯಭೀತಿಯ ವಾತಾವರಣ ಉಂಟಾಗಿರುವುದನ್ನು ಕಂಡು ತನ್ನ ಅತೀವ ದುಃಖವನ್ನು ಪ್ರದರ್ಶಿಸುತ್ತ, ಪ್ಲಾಂಟೇಶನ್ ಕಾರ್ಮಿಕರಿಗೆ ತಮ್ಮ ನ್ಯಾಯವಾದ ಹಕ್ಕುಗಳನ್ನೆಲ್ಲ ನಿರಾಕರಿಸಿ ಅವರ ಮೇಲೆ ಅಪಾರ ದಬ್ಬಾಳಿಕೆ ನಡೆಯುತ್ತಿದ್ದರೂ ಕೂಡ, ಅವರೆಲ್ಲ ತಮ್ಮ ಬೇಡಿಕೆಗಳನ್ನು ಪಡೆಯಲು ಸಂಘಟಿತರಾಗುತ್ತಿರುವ ಈ ಸಂದರ್ಭದಲ್ಲಿ ತೋಟ ಮಾಲಿಕರು, ಛಿದ್ರಕಾರಿ ಮತೀಯ ಶಕ್ತಿಗಳೂ ಕಾರ್ಮಿಕರಲ್ಲಿ ಒಡಕುಂಟು ಮಾಡುವ ಭಯದ ಪರಿಸ್ಥಿತಿ ಉಂಟು ಮಾಡುತ್ತಿರುವುದನ್ನೂ ನೆರೆ ರಾಜ್ಯದ ಕೆಲಸಗಾರರ ಮೇಲೆ ದೌರ್ಜನ್ಯ ನಡೆಸುತ್ತಿರುವುದನ್ನೂ ಅಖಿಲ ಭಾರತ ಪ್ಲಾಂಟೇಶನ್ ವರ್ಕರ್ಸ್ ಫೆಡರೇಶನಿನ ಕಾರ್ಯಕಾರಿ ಸಮಿತಿ ಸಭೆ ತೀವ್ರವಾಗಿ ಖಂಡಿಸಿದೆ.

ನವೆಂಬರ್ 29.30 ರಂದು ವಿರಾಜಪೇಟೆಯಲ್ಲಿ ಸೇರಿದ್ದ ಕಾರ್ಯಕಾರಿ ಸಮಿತಿ ಸಭೆ ದೇಶದ ಹಾಗೂ ಕರ್ನಾಟಕ ರಾಜ್ಯದ ಪ್ಲಾಂಟೇಶನ್ ಕೆಲಸಗಾರರ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿತು. ಹಲವಾರು ನಿರ್ಣಯಗಳನ್ನು ಕೈಗೊಂಡಿತು. ಕ್ಷುಲ್ಲಕ ಕಾರಣಕ್ಕಾಗಿ ವಿರಾಜಪೇಟೆ ನಗರ ಮತ್ತು ಅದರ ಸುತ್ತ ಮುತ್ತ ಕೇರಳದಿಂದ ಬಂದು ಹಲವಾರು ವರ್ಷಗಳ ಹಿಂದೆಯೇ ಅಲ್ಲಿ ನೆಲೆಸಿ ಒಕ್ಕಲುತನ, ವ್ಯಾಪಾರ, ಕೂಲಿ ಕೆಲಸ, ತೋಟ ಕೆಲಸಗಳಲ್ಲಿರುವ ಅಲ್ಪ ಮತಸ್ತರ ಮೇಲೆ ದಬ್ಬಾಳಿಕೆ, ಲೂಟಿ, ಹಿಂಸಾ ಕೃತ್ಯಗಳಾದೆ, ಒಬ್ಬನ ಕೊಲೆ ಕೂಡ ಆಗಿರುವ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿ ಸಭೆ ಸೇರಿತ್ತು. ತೋಟ ಮಾಲಕರ, ಛಿದ್ರಕಾರಿ ಶಕ್ತಿಗಳ ಒತ್ತಡಕ್ಕೆ ಬಲಿಯಾಗಿ ಜಿಲ್ಲಾಧಿಕಾರಿಗಳು ವಿರಾಜಪೇಟೆಯಲ್ಲಿ ಏರ್ಪಡಿಸಿದ್ದ ಕಾರ್ಮಿಕರ ಸಾರ್ವಜನಿಕ ಸಭೆಗೆ ಅವಕಾಶ ಮಾಡಿಕೊಡಲಿಲ್ಲ. ಅಷ್ಟೆ ಅಲ್ಲ ದೂರದ ಸಿದ್ದಾಪುರದಲ್ಲಿ ಸಭೆ ನಡೆಸುತ್ತೇವೆಂದು ಕೇಳಿಕೊಂಡರೂ ಅದಕ್ಕೂ ಒಪ್ಪಿಗೆ ನೀಡದೆ ಕಾರ್ಮಿಕರೆಲ್ಲ ಅಖಿಲ ಭಾರತ ಮುಖಂಡರ ಭಾಷಣ ಕೇಳುವ ಅವಕಾಶ ನಿರಾಕರಿಸಿದ್ದಾರೆ.

ಇಂಥ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿಯ ನಿರ್ಣಯ "ಪ್ಲಾಂಟರುಗಳು ಮತ್ತು ಸ್ವಹಿತ ಸಾಧಕರು ಬೆಳೆಯುತ್ತಿರುವ ಕಾರ್ಮಿಕರ ಚಳುವಳಿಗೆ ಆತಂಕ ಒಡ್ಡುತ್ತಿದ್ದಾರೆ ಅದನ್ನು ನಾಶಗೊಳಿಸುವ ಪ್ರಯತ್ನದಲ್ಲಿದ್ದಾರೆ, ಅದನ್ನು ಸಾಧಿಸುವ ದುರುದ್ದೇಶದಿಂದ ಸಮಾಜ ಘಾತುಕ ಹಾಗೂ ಛಿದ್ರಕಾರಿ ಶಕ್ತಿಗಳನ್ನು ಉಪಯೋಗಿಸುತ್ತಿದ್ದಾರೆ. ಅಲ್ಪ ಮತೀಯರು ನಡೆಸುತ್ತಿರುವ ಕೆಲವೇ ಅಂಗಡಿಗಳ ಮೇಲೆ ಆಕ್ರಮಣ ನಡೆಸಲಾಗುತ್ತಿದೆ. ನಿರಪರಾಧಿ ಜನರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಜನರನ್ನು ಕೊಲ್ಲುವ ಮಟ್ಟಿಗೂ ಅದು ಮುಂದುವರಿದಿದೆ" ಎಂದು ಹೇಳಿದೆ.

"ಸಾಮ್ರಾಜ್ಯಶಾಹಿಗಳ ಸಹಾಯದಿಂದ ಛಿದ್ರಕಾರಿ ಮತ್ತು ಭಯೋತ್ಪಾದಕ ಶಕ್ತಿಗಳು ಇತ್ತೀಚಿನ ವರ್ಷಗಳಲ್ಲಿ ಜಾತೀಯ ಗಲಭೆಗಳನ್ನು ಎಬ್ಬಿಸುತ್ತಿದ್ದಾರೆ. ಪಂಜಾಬಿನಲ್ಲಿ ಖಲಿಸ್ತಾನ ಚಳುವಳಿ, ಪಶ್ಚಿಮ ಬಂಗಾಲದಲ್ಲಿ ಗೂರ್ಖಾಲ್ಯಾಂಡ್ ಹೋರಾಟ, ತ್ರಿಪುರದಲ್ಲಿ ಟಿ. ಎನ್. ವಿ. ಗಳಿಂದ ಆಕ್ರಮಣ ನಡೆದಿದೆ. ಈ ಸ್ಥಳಗಳಲ್ಲೆಲ್ಲ ಛಿದ್ರಕಾರಿ ಶಕ್ತಿಗಳ ಜನತಾ ವಿರೋಧಿ ಚಟುವಟಿಕೆಗಳನ್ನು ಸೋಲಿಸುವ ಸಲುವಾಗಿ ಕಾರ್ಮಿಕರ ಐಕ್ಯತೆಯನ್ನು ಸಾಧಿಸಿ ಜನ ಬೆಂಬಲ ಪಡೆಯಲು ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವ ಜನತೆಗೆ ಮಾತ್ರ ಸಾಧ್ಯವಾಗಿದೆ" ಎಂದು ನಿರ್ಣಯ ಹೇಳಿದೆ.

ಕಾರ್ಮಿಕ ವರ್ಗ ಮತೀಯ, ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡುತ್ತಿರುವಾಗ "ಕೊಡಗಿನ ಜಿಲ್ಲಾಧಿಕಾರಿಗಳು, ರಾಜ್ಯ ಸರ್ಕಾರದ ಆಶೀರ್ವಾದದಿಂದ ವಿರಾಜಪೇಟೆಯಲ್ಲೂ ಅನಂತರ ಸಿದ್ದಾಪುರದಲ್ಲೂ ಸಾರ್ವಜನಿಕ ಸಭೆಯ ಮೇಲೆ ಪ್ರತಿಬಂಧ ಹೇರಿದ್ದಾರೆ, ಆ ರೀತಿ ಮಾಡಿ ಈ ಭಾಗದ ಕಾರ್ಮಿಕ ವರ್ಗಕ್ಕೆ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ತನ್ನ ಪಾತ್ರ ನಿರ್ವಹಿಸಲು ಅವಕಾಶ ನಿರಾಕರಿಸಿದೆ. ಕಾರ್ಮಿಕರನ್ನು ಸಂಘಟಿಸಿ, ಭಯೋತ್ಪಾದಕರ, ವಿಭಜನಕಾರಿ ಶಕ್ತಿಗಳ ವಿರುದ್ಧ ಜನಾಭಿಪ್ರಾಯ ಮೂಡಿಸುವ ಸಲುವಾಗಿ ಮೆರವಣಿಗೆ ಸಭೆಗಳನ್ನು ಏರ್ಪಡಿಸಲು ರಾಜ್ಯ ಸರಕಾರ ಪ್ಲಾಂಟೇಶನ್ ಕಾರ್ಮಿಕರಿಗೆ ಅವಕಾಶ ನಿರಾಕರಿಸಿರುವುದನ್ನು ಸಭೆ ಬಲವಾಗಿ ಖಂಡಿಸಿ, ಸಭೆ ಮೆರವಣಿಗೆಗಳಿಗೆ ಪೂರ್ಣ ಅವಕಾಶ ಒದಗಿಸಬೇಕೆಂದು ಒತ್ತಾಯಪಡಿಸುತ್ತದೆ. ಕೊಡಗು ಜಿಲ್ಲೆಯ ಕಾರ್ಮಿಕರೂ ಹಾಗೆಯೇ ಎಲ್ಲ ವರ್ಗದ ಜನರೂ ಒಗ್ಗಟ್ಟಾಗಬೇಕೆಂದೂ, ಜಾತೀಯ ಗಲಭೆಗಳನ್ನೂ ಸಮಾಜ ಘಾತುಕ ಶಕ್ತಿಗಳನ್ನೂ ಖಂಡಿಸಬೇಕೆಂದೂ, ಜಾತೀಯ ಸೌಹಾರ್ದತೆಯನ್ನು ಕಾಪಾಡಲು ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯಲು ಶ್ರಮಿಸಬೇಕೆಂದೂ ಕೇಳಿಕೊಳ್ಳುತ್ತದೆ" ಎಂದು ನಿರ್ಣಯ ಹೇಳಿದೆ. ●

ಪಂಜಾಬಿನಲ್ಲಿ ಮತ್ತೆ ಕೊಲೆಗಳ ಮಹಾಪೂರ

ಲೋಕಸಭೆಯಲ್ಲಿ ಪ್ರತಿಭಟನೆ

ನವೆಂಬರ್ 30 ರಂದು ಪಂಜಾಬಿನ ಹೋಷಿಯಾರ್‌ಪುರ ಜಿಲ್ಲೆಯ ತಾಂಡಾದ ಬಳಿ 24 ಜನ ಬಸ್ ಪ್ರಯಾಣಿಕರ ನರಮೇಧ. ಭಯೋತ್ಪಾದಕರು ಈ ಹಲ್ಲೆಯ ಪ್ರತಿಹಂತವನ್ನೂ ಪ್ರತಿ ಹೆಜ್ಜೆಯನ್ನೂ ಸೂಕ್ಷ್ಮವಾಗಿ ಯೋಜಿಸಿದ್ದರು. ಖಾಲಿಸ್ತಾನ್ ಸಶಸ್ತ್ರ ಪೋಲಿಸ್‌ದಳ ಎಂದು ಕರೆದುಕೊಂಡ ತಂಡದಿಂದ ಈ ಹತ್ಯೆಯ ಯೋಜನೆ.

ಈ ಹತ್ಯೆ ನಡೆದ ಸುದ್ದಿ ದೆಹಲಿಯನ್ನು ತಲುಪಿದ ತಕ್ಷಣವೇ ಸಿ.ಪಿ.ಐ. (ಎಂ) ಕೇಂದ್ರ ಸಮಿತಿಯಿಂದ ದೆಹಲಿ ಜನತೆಗೆ ಕರೆ "ಭಯೋತ್ಪಾದಕರ ಈ ಭಯಂಕರ ಕೃತ್ಯದಿಂದ ಉದ್ರೇಕಗೊಳ್ಳದಿರಿ. ಶಾಂತತೆಯನ್ನು ಕಾಪಾಡಿ" ಎಂದು ಅದರ ಜೊತೆಯಲ್ಲಿಯೇ ದೆಹಲಿ ಆಡಳಿತಕ್ಕೆ, ಈ ಭಯಂಕರ ಕೃತ್ಯವನ್ನು ದುರುಪಯೋಗ ಪಡಿಸಿಕೊಂಡು ಮತ್ತೊಮ್ಮೆ ಮತಾಂಧತೆಯ ಕಿಚ್ಚು ಹಬ್ಬಿಸುವ ಶಕ್ತಿಗಳ ವಿರುದ್ಧ ಎಚ್ಚರಿಕೆಯನ್ನು ವಹಿಸಿ ಎಂದು ಸೂಚನೆ. ಇದಕ್ಕೆ ಸಾಕ್ಷಿಯೆಂಬಂತೆ ಹಿಂದೂ ಮತೀಯವಾದಿಶಕ್ತಿಗಳಿಂದ ದೆಹಲಿಯ ಬಂದ್‌ಗೆ ಕರೆ ಹಾಗೂ ಬಂದ್‌ನಲ್ಲಿ ಹಿಂಸಾತ್ಮಕ ಘಟನೆಗಳು ಹಾಗೆಯೇ ಪಂಜಾಬ್‌ನಲ್ಲಿ, ಹರ್ಯಾಣದಲ್ಲಿ ಚಂಡೀಘಡದಲ್ಲಿ ಸಂಪೂರ್ಣ ಯಶಸ್ವಿ ಬಂದ್. ರಾಷ್ಟ್ರೀಯ ಸುರಕ್ಷಾ ಸಮಿತಿ, ಹಿಂದೂ ಶಿವಸೇನೆಗಳಂತಹ ಮತಾಂಧ ಶಕ್ತಿಗಳಿಂದ ಹಿಂಸೆ.

ಈ ಘಟನೆಗೆ ಹೊಣೆ ಯಾರು ?

ಲೋಕಸಭೆಯಲ್ಲಿ ಹಾಗೂ ರಾಜ್ಯ ಸಭೆಯಲ್ಲಿ ಸಿ.ಪಿ.ಐ (ಎಂ), ಸಿ.ಪಿ.ಐ ಹಾಗೂ ಜನತಾ ಪಕ್ಷಗಳಿಂದ ಕೇಂದ್ರ

(8ನೇ ಪುಟ ನೋಡಿ)

ಲಂಕೇಶ ಪತ್ರಿಕೆಯಲ್ಲಿನ ಲೇಖನಕ್ಕೊಂದು ಉತ್ತರ

ಪೂರ್ವಾಗ್ರಹ ಪೀಡಿತ ಪ್ರಲಾಪ

ನಾನು ಸ್ವತಃ ಬರಹಗಾರನೂ ಅಲ್ಲ, ವಿಮರ್ಶಕನೂ ಅಲ್ಲ. ಸಾಮಾನ್ಯ ಜನರ ಮಧ್ಯೆ ಕೆಲಸ ಮಾಡುತ್ತಿರುವವನು. ಮಾಲಾ ಮಂಜುನಾಥರ ಲೇಖನ ಓದಿದ ಮೇಲೆ ನಿಮ್ಮಂತಹ ಪತ್ರಿಕೆ ಸಹ ಇಂತಹ ಕೆಳ ದರ್ಜೆಯ ಬೇಜವಾಬ್ದಾರಿಯ ಮತ್ತು ಅಪ್ರಬುದ್ಧ ಲೇಖನಗಳನ್ನು ಪ್ರಕಟಿಸುತ್ತಿರುವುದು. ನಿಮ್ಮ ಪತ್ರಿಕೆಯನ್ನು ಓದುವ ಜಾಣ-ಜಾಣೆಯರಿಗೆ ಆಘಾತ ಉಂಟು ಮಾಡುತ್ತದೆ.

ಎಲ್ಲಾ ರಾಜಕೀಯ ಪಕ್ಷಗಳನ್ನು ಸಿದ್ಧಾಂತಗಳನ್ನು, ಧ್ಯೇಯ ಧೋರಣೆಗಳನ್ನು ಮತ್ತು ರಾಜಕೀಯ ವ್ಯಕ್ತಿಗಳನ್ನು ವಿಮರ್ಶೆ ಮಾಡುವ ಮತ್ತು ಟೀಕಿಸುವ ಹಕ್ಕು ಎಲ್ಲರಿಗೂ ಇದೆ. ಏಕೆಂದರೆ ಇವು ಸಾರ್ವಜನಿಕ ವಿಷಯಗಳು. ಆದರೆ ಯಾವುದೇ ರಾಜಕೀಯ ಪಕ್ಷವನ್ನು, ಸಿದ್ಧಾಂತವನ್ನು, ಧ್ಯೇಯ ಧೋರಣೆಗಳನ್ನು ಮತ್ತು ವ್ಯಕ್ತಿಗಳನ್ನು ಟೀಕಿಸುವ ಮತ್ತು ವಿಮರ್ಶಿಸುವ ಮೊದಲು ಅವುಗಳ ಬಗ್ಗೆ ತಿಳುವಳಿಕೆ ಇದ್ದು ವಿಮರ್ಶಿಸಿದರೆ ಅದು ರಚನಾತ್ಮಕವೂ ಮಾರ್ಗದರ್ಶಕವೂ ಆಗುತ್ತದೆ. ಇಲ್ಲದಿದ್ದರೆ, ಅದು ಉದ್ಧಟತನ ಮತ್ತು ಪೂರ್ವಗೃಹ ಪೀಡಿತವಾಗುತ್ತದೆ.

ಮಾಲಾ ಮಂಜುನಾಥರು "ವಂಶ ಪಾರಂಪರ್ಯ, ಜಾತಿ ಮತ್ತು ರಾಜಕೀಯದ" ಬಗ್ಗೆ ಬರೆಯುತ್ತಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಉದಾಹರಿಸಿದ್ದಾರೆ. ಬರೆಯಲು ಅಕ್ಷರಗಳು ಬರುತ್ತವೆಂದು ತಾನು ಏನು ಬರೆದರೂ ಪ್ರಕಟಿಸುವ ಪತ್ರಿಕೆಗಳು ಇವೆಯೆಂದು, ಆ ಪಕ್ಷದ ಸಿದ್ಧಾಂತ (ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದ) ದ ಬಗ್ಗೆ ಅ, ಆ, ಇ, ಈ ಗೊತ್ತಿಲ್ಲದಿದ್ದರೂ ತಾನೂ ಮಹಾ ಮೇಧಾವಿ ಮತ್ತು ಸರ್ವಜ್ಞಳಂತೆ ಈ ಲೇಖನದಲ್ಲಿ ಫೋಸ್ (Pose) ಕೊಟ್ಟಿದ್ದಾರೆ.

ಮೊದಲನೆಯದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿ ಕೆಳಗಿನಿಂದ ಮೇಲಿನವರೆಗೂ ಒಂದೇ ಜಾತಿ ಜನ ಕಂಡು ಬಂದಿದೆ. ಈ ದೇಶದ ಭವಿಷ್ಯವನ್ನು ಅನುಮಾನದಿಂದಲೇ ನೋಡಬೇಕಾಗುತ್ತದೆ. ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾಲ ಮಂಜುನಾಥರಿಗೆ ಅಂಕಿ ಅಂಶಗಳನ್ನು ಕೊಡುವ ಅವಶ್ಯಕತೆ ನನಗೆ ಇಲ್ಲದಿದ್ದರೂ ಕನಿಷ್ಟ ಅವರು ಆ ಪಕ್ಷದ ಸದಸ್ಯರಲ್ಲಿ ಯಾವ ಯಾವ ಜಾತಿಯವರಿದ್ದಾರೆ, ಯಾವ ಜಾತಿಯವರು ಅದರಲ್ಲಿ ಹೆಚ್ಚಿಗೆ ಇದ್ದಾರೆ ಎಂಬುವುದನ್ನು ತಿಳಿಯುವ ಕನಿಷ್ಟ ಶ್ರಮವನ್ನಾದರೂ ತೆಗೆದುಕೊಂಡರೆ ಇವರ ಅಜ್ಞಾನ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತದೆ,

ಮಾರ್ಕ್ಸ್‌ವಾದದ ಪ್ರಕಾರ ಇಂತಹ ವರ್ಗದವರು, ಇಂತಹ ಜಾತಿಯವರು ಮಾತ್ರ 'ಕಮ್ಯುನಿಸ್ಟ್ ಪಕ್ಷ' ಕ್ಕೆ ಇಲ್ಲ. ಕಮ್ಯುನಿಸ್ಟ್ ಪಕ್ಷಕ್ಕೆ ಸೇರಬಯಸುವವರು ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ಪ್ರಾಮಾಣಿಕ ನಂಬಿಕೆ ಇರುವವರು. ಆ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರಲು ಎಂತಹ ತ್ಯಾಗಕ್ಕೂ ಸಿದ್ಧರಿರುವರು. ಇಂಡಿಯಾದಲ್ಲಿ ಜಾತಿ ವ್ಯವಸ್ಥೆ ಇರುವುದು ಎಷ್ಟು ಸತ್ಯವೊ, ಕಮ್ಯುನಿಸ್ಟ್ ಪಕ್ಷದಲ್ಲಿ ಎಲ್ಲಾ ಜಾತಿಯವರೂ ಇರುವುದು ಅಷ್ಟೇ ಸತ್ಯ. ಇಷ್ಟು ತಿಳುವಳಿಕೆ ಇಲ್ಲವಾದರೂ ಸಹ ಇವತ್ತು ಲೇಖಕರಾಗಿದ್ದಾರೆ. ಕಮ್ಯುನಿಸ್ಟ್ ಪಕ್ಷದಲ್ಲಿ ಒಂದೇ ಜಾತಿಯವರು ಇರುವುದು ನೋಡಿದರೆ ದೇಶದ ಭವಿಷ್ಯವನ್ನು ಅನುಮಾನದಿಂದ ನೋಡಬೇಕಾಗುತ್ತದೆ ಎಂಬ ಗುಮಾನಿ ಮಾಲಾ ಮಂಜುನಾಥರಿಗೆ ಬಂದಿದ್ದರೆ, ನಮ್ಮಂತಹ ಸಾಮಾನ್ಯ ಜನರಿಗೆ ಇಂತಹವರ ಅಜ್ಞಾನದಿಂದಾಗಿ ಮತ್ತು ಇವರ ಮೂರ್ಖತನದ ಲೇಖನಗಳಿಂದಾಗಿ ಈ ದೇಶದಲ್ಲಿ ಏನೇನು ಅನಾಹುತಗಳಗುತ್ತವೆ ಎಂಬುದಾಗಿ ಗುಮಾನಿ ಬರುತ್ತದೆ.

ಎರಡನೆಯದಾಗಿ ಮಾರ್ಕ್ಸ್‌ವಾದಿಗಳು ಯುರೋಪಿನಲ್ಲಿ "ಕ್ರಿಶ್ಚಿಯಾನಿಟಿ" ವಿರುದ್ಧ ಯಶಸ್ಸು ಪಡೆದರೂ ಇಲ್ಲಿ ಮಾತ್ರ ಜಾತಿ. ಮತ್ತು ಉಪಜಾತಿಗಳ ಕುಹಕತನದಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಇವರಿಗೆ ಯುರೋಪಿನ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ ಮತ್ತು ಧಾರ್ಮಿಕ ಹಿನ್ನೆಲೆಯ ಗಾಳಿ ಗಂಧವಾಗಲಿ, ಇಂಡಿಯಾದ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಧಾರ್ಮಿಕ ಹಿನ್ನೆಲೆಯ ಗಾಳಿಗಂಧಗಳು ಗೊತ್ತಿಲ್ಲದೆ ಅಲ್ಲಿ ಕ್ರಿಶ್ಚಿಯಾನಿಟಿ ವಿರುದ್ಧ ಯಶಸ್ಸು ಪಡೆದರೂ ಇಲ್ಲಿ ಸೋತರೂ ಎಂದಿರುವುದು ನಿಜಕ್ಕೂ ಅಜ್ಞಾನದ ಪರಮಾವಧಿಯೇ ಸರಿ. ಮುಂದುವರಿದು ಅವರು ಕೇರಳದಲ್ಲಿ ಸಿ. ಪಿ. ಐ (ಎಂ) ಪಕ್ಷದವರು ಆರ್. ಎಸ್. ಎಸ್. ಜನಪ್ರಿಯತೆಯೊಂದಿಗೆ ಸ್ಪರ್ಧಿಸಲು ದೇವಸ್ಥಾನಗಳಲ್ಲಿ ಪೂಜೆಗಳನ್ನು ಮಾಡಿಸುತ್ತಾ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುತ್ತಾ ಕಾಲ ಕಳೆಯುತ್ತಿದ್ದಾರೆ ಎಂದು ಬರೆದಿದ್ದಾರೆ. ಇದಂತೂ ಅಪ್ಪಟ ಸುಳ್ಳು.

ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಕ್ರಾಂತಿಯಾಗಿ ಸಮಾಜವಾದಿ ವ್ಯವಸ್ಥೆ ಬಂದರೆ ಎಲ್ಲಾ ದೇವಸ್ಥಾನಗಳನ್ನು, ಚರ್ಚುಗಳನ್ನು ಮತ್ತು ಮಸೀದಿಗಳನ್ನು ನೆಲ ಸಮ ಮಾಡಬೇಕೆ? ಇಂದು ಸಮಾಜವಾದಿ ರಾಷ್ಟ್ರಗಳಲ್ಲಿ ಯಾವುದೇ "ಗುಡಿ ಗೋಪುರ" ಚರ್ಚು ಮಸೀದಿಗಳನ್ನು ಕೆಡವಿ ಹಾಕಿಲ್ಲ ಬದಲು ಅವುಗಳನ್ನು ಆ ದೇಶದ ಹಳೆಯ ಸಮಾಜದ ಪ್ರತೀಕಗಳನ್ನಾಗಿ ರಕ್ಷಿಸಿದ್ದಾರೆ.

ತಿರುಪತಿಯಲ್ಲಿ "ಮಾರ್ಕ್ಸ್" ನ ಪ್ರತಿಮೆಯನ್ನು ಸ್ಥಾಪಿಸಿದ್ದಾರೆಂದು ಹೇಳಿದ್ದಾರೆ. ತಿರುಪತಿಯಲ್ಲಿ ಸಿ.ಪಿ.ಐ. (ಎಂ) ಅಥವಾ ಯಾವುದೇ ಕಮ್ಯುನಿಸ್ಟ್ ಇದನ್ನು ಮಾಡಿಲ್ಲ. ಬೇರೆ ಯಾರಾದರೂ ಸ್ಥಾಪಿಸಿದ್ದರೆ ಅದಕ್ಕೆ ಯಾರು ಜವಾಬ್ದಾರರು?

ವಯೋ ವೃದ್ಧರು ಮನೋ ವೃದ್ಧರು

ವಿಶ್ವದಾದ್ಯಂತ ಕಮ್ಯುನಿಸ್ಟರಿಗೆ ಇದೊಂದು ರೋಗ, ಎಲ್ಲಿ ನೋಡಿದರೂ ಪಕ್ಷದ ನಾಯಕರು ವಯೋ ವೃದ್ಧರು ಎಂದು ಬರೆದಿದ್ದಾರೆ.

ಇಪ್ಪತ್ತರ ಹರೆಯದ ಯುವಕನೊಬ್ಬ ಮೂರು ಮತ್ತು ನಾಲ್ಕನೆ, ಶತಮಾನದ ಸಿದ್ಧಾಂತಗಳನ್ನು ತನ್ನ ರಕ್ತದಲ್ಲಿ ತುಂಬಿಕೊಂಡಿದ್ದರೂ ಅವನನ್ನು ಯುವಕನೆಂದು ಕರೆಯಬೇಕೆ? ಎಂಬತ್ತು ವರ್ಷದ ವಯೋವೃದ್ಧರೊಬ್ಬರು ವೈಜ್ಞಾನಿಕ ಸಿದ್ಧಾಂತಗಳನ್ನು ದಿನ ದಿನದ ಹೊಸ ಬೆಳವಣಿಗೆಗಳನ್ನು ಮೈಗೂಡಿಸಿಕೊಂಡಿದ್ದರೂ ಅವನನ್ನು ಮುದುಕನೆಂದು ಕರೆಯಬೇಕೆ? ಇಲ್ಲ ಹೊಸ ರಕ್ತದ ಯುವಕರು ಎನ್ನುವುದನ್ನು ವಯಸ್ಸಿನಿಂದ ಅಳೆಯುವುದಾದರೆ ಆರ್. ಎಸ್. ಎಸ್. ಯುವಕರು ಮತ್ತು ಜಮಾತೇ ಇಸ್ಲಾಮಿನ ಯುವಕರೂ ಕೂಡ ಯುವಕರೆ ಯುವ ಕಾಂಗ್ರೆಸ್ಸಿನವರೂ ಯುವಕರೆ ಈ ದೇಶದ ನಾಯಕತ್ವವನ್ನು ಅವರಿಗೆ ಕೊಡಬಹುದಲ್ಲಾ?

ಸಿ. ಪಿ. ಐ (ಎಂ) ಪಕ್ಷದ ಪಾಲಿಟ್ ಬ್ಯೂರೊ ಸದಸ್ಯರ ವಯಸ್ಸಿನ ಬಗ್ಗೆ ಬರೆದು ಅವರೆಲ್ಲರೂ ವಯೋವೃದ್ಧರೆಂದು ಟೀಕಿಸಿದ್ದಾರೆ. ಇ. ಎಮ್. ಎಸ್., ಬಿ. ಟಿ. ರಣದಿವೆ, ಬಸವಪುನ್ನಯ್ಯ, ಸೂರ್ಜಿತ್, ಜ್ಯೋತಿ ಬಸು ಅವರುಗಳ ತ್ಯಾಗ ಪ್ರಾಮಾಣಿಕತೆ. ತಿಳುವಳಿಕೆ ಮತ್ತು ಅಭ್ಯಾಸದ ಬಗ್ಗೆ ಮಾತನಾಡಲು ನಮ್ಮ ನಿಮ್ಮಂತಹವರು ಶಕ್ತರಲ್ಲ

ತಮ್ಮ ವಯಸ್ಸಿನ ಅರ್ಧದಷ್ಟು ಭಾಗಗಳನ್ನು ಇವರು ಜೈಲುಗಳಲ್ಲಿ ಕಳೆದಿದ್ದಾರೆ. ಈ ದೇಶದ ವಿಮುಕ್ತಿಗಾಗಿ, ದುಡಿಯುವ ಜನರ ಮುಕ್ತಿಗಾಗಿ, ವಿದ್ಯಾರ್ಥಿ ಯುವ ಜನರ ಭವಿಷ್ಯಕ್ಕಾಗಿ ತಮ್ಮ ಇಡೀ ಜೀವಮಾನವನ್ನೇ ಧಾರೆಯೆರೆದಿದ್ದಾರೆ.

ಇ. ಎಮ್. ಎಸ್. ರವರ ಜೀವನ ಚರಿತ್ರೆ ಎ. ಕೆ. ಗೋಪಾಲನ್‌ರವರ ಜೀವನ ಚರಿತ್ರೆ, ಸುಂದರಯ್ಯನವರ ಜೀವನ ಚರಿತ್ರೆಗಳನ್ನು ಓದಿದವರಿಗಷ್ಟೇ ಇದು ತಿಳಿದಿರುತ್ತದೆ.

ಅವರು ಎದುರಿಸಿರುವ ಕಷ್ಟ ಕಾರ್ಪಣ್ಯಗಳು, ಮಾಡಿರುವ ತ್ಯಾಗ ಬಲಿದಾನಗಳೂ, ಎಂತಹವರಲ್ಲೂ ಸ್ಫೂರ್ತಿಯನ್ನು ತುಂಬುತ್ತದೆ. ಈ ವಯಸ್ಸಿನಲ್ಲಿ ಅವಿರತವಾಗಿ ಈ ದೇಶದಲ್ಲಿನ ಮೂಲಭೂತ ಬದಲಾವಣೆಗಾಗಿ ವೈಜ್ಞಾನಿಕ ಚಿಂತನೆಯನ್ನು ನಡೆಸಿ, ಲಕ್ಷಾಂತರ ವಿದ್ಯಾರ್ಥಿ ಯುವ ಜನರಲ್ಲಿ ದುಡಿಯುವ ರೈತ ಕಾರ್ಮಿಕರಲ್ಲಿ, ಕೃಷಿ ಕೂಲಿಗಾರರಲ್ಲಿ ಕ್ರಾಂತಿಕಾರಿ ಮನೋಭಾವನೆಯನ್ನು ಬೆಳೆಸಿ ಅವರಿಗೆ ಸ್ಫೂರ್ತಿಯ ಚಿಲುಮೆಗಳಾಗಿರುವ ಮಹಾನ್ ತ್ಯಾಗ ಜೀವಿಗಳು ಇವರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಜವಾದ ಹೈಕಮಾಂಡ್ ಅದರ ಕೇಂದ್ರ ಸಮಿತಿ. ಆ ಕೇಂದ್ರ ಸಮಿತಿಯಲ್ಲಿ ಎಷ್ಟು ಜನ ಯುವಕರುಇದ್ದಾರೆ ಎಂಬುದು ನಿಮಗೆ ಅರಿವು ಇಲ್ಲದಿರುವುದಕ್ಕೆ ಅನುಕಂಪವಾಗುತ್ತದೆ. ಸೀತಾರಾಂ ಯೆಚೂರಿ, ಪ್ರಕಾಶ್ ಕಾರಟ್, ವಿಪ್ಲವದಾಸ್ ಗುಪ್ತ, ಹನನ್ ಮುಲ್ಲಾ ಬಿಮಾನ ಬಸು, ಬುದ್ಧದೇವ ಭಟ್ಟಾಚಾರ್ಯ, ಅನಿಲ್ ಬಿಸ್ವಾಸ್, ಇನ್ನೂ ಅನೇಕರು, ಎಲ್ಲರ ಹೆಸರನ್ನು ಇಲ್ಲಿ ಬರೆಯಲು ಸಾಧ್ಯವಿಲ್ಲ. ಇವರೆಲ್ಲರೂ ಯುವಕರೇ.

1980 ರ ಲೋಕ ಸಭೆಯಲ್ಲಿ ಬೇಬಿ ಆಫ್ ದಿ "ಪಾರ್ಲಿಮೆಂಟ್" ಡಾ. ಸೈಫುದ್ದಿನ ಚೌಧುರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರೆಂಬುದು ನಿಮಗೆ ಗೊತ್ತೆ? ಹನನ್ ಮುಲ್ಲಾ ನೇಪಾಳ ದೇವ್ ಭಟ್ಟಾಚಾರ್ಯ, ಎಂ. ಎ. ಬೇಬಿ, ಸುರೇಶ್ ಕುರುಪ್ ಇವರೆಲ್ಲಾ ಯಾವ ಪಕ್ಷದ ಪಾರ್ಲಿಮೆಂಟ್ ಸದಸ್ಯರೆಂಬುದು ನಿಮಗೆ ಗೊತ್ತಿದೆಯೇ? ಕನಿಷ್ಟ ಪ್ರತಿ ದಿನ ಪತ್ರಿಕೆಗಳನ್ನಾದರದ ಓದಿ.

ಎಂ. ವಿ, ರಾಘವನ್‌ರವರನ್ನು ಪಕ್ಷದಿಂದ ಹೊರ ಹಾಕಿರುವುದರ ಬಗ್ಗೆ ಬರೆದಿದ್ದಾರೆ. ಇದರಿಂದ ಸಿ.ಪಿ.ಐ. (ಎಂ) ಪಕ್ಷಕ್ಕೆ ಕೇರಳದಲ್ಲಿ ಯಾವುದೇ ರೀತಿಯಲ್ಲೂ ನಷ್ಟವಾಗಿಲ್ಲ ಬದಲು ಪಕ್ಷದ ಘನತೆ ಹೆಚ್ಚಿದೆ.

1982 ರ ವಿಜಯವಾಡ ಸಮ್ಮೇಳನದ ತೀರ್ಮಾನಗಳ ಬಗ್ಗೆ ಬರೆದಿದ್ದೀರಿ. ವಿಜಯವಾಡ ಸಮ್ಮೇಳನದ ದಸ್ತಾವೇಜುಗಳನ್ನು ಓದದೆ ಈ ರೀತಿ ಬೇಜವಾಬ್ದಾರಿಯುತವಾಗಿ ಬರೆಯುವುದು ತೀರ ಸಣ್ಣತನವಾಗುತ್ತದೆ. ಕೋಮುವಾದಿ, ಪ್ರತ್ಯೇಕತಾವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳು, ವಿದೇಶೀಯ ಸಾಮ್ರಾಜ್ಯಶಾಹಿ ಶಕ್ತಿಗಳ ಸಹಾಯದಿಂದ ಈ ದೇಶಕ್ಕೆ ಎಂತಹ ಅಪಾಯವನ್ನು ತಂದೊಡ್ಡಿದ್ದಾರೆಂಬುದರ ಬಗ್ಗೆ ಕನಿಷ್ಠ ಅರಿವಿರುವವಾರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಜಯವಾಡ ಸಮ್ಮೇಳನದ ತೀರ್ಮಾನಗಳ ಬಗ್ಗ ವಿಮರ್ಶಿಸುವುದಿಲ್ಲಾ. ಈ ಸಮ್ಮೇಳನದ ತೀರ್ಮಾನದ ಆಧಾರದ ಮೇಲೆ ಶ್ರೀ. ಎಂ. ವಿ ರಾಘವನ್‌ರನ್ನು ಪಕ್ಷದಿಂದ ಹೊರ ಹಾಕಿದ್ದಾರೆ. ಮಹಾಧಿವೇಶನ ಎಂದರೆ ಏನೆಂದು ಅರ್ಥಗೊತ್ತಿಲ್ಲದವರಿಗೆ ಇದು ಹೇಗೆ ಅರ್ಥವಾಗಬೇಕು?

ಬಂಗಾಳದಲ್ಲಿ ಪಂಚಾಯ್ತಿ ವ್ಯವಸ್ಥೆ ಯಾವ ರೀತಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ ಎಂಬುದರ ಬಗ್ಗೆ ಅರಿವಿಲ್ಲದೆ ಅದು ಶ್ರೀಮಂತರ ಕೈಯಲ್ಲಿರುವುದರಿಂದ ಭೂಸುಧಾರಣೆ ಜಾರಿ ಆಗಿಲ್ಲವೆಂದು ಬರೆದಿದ್ದೀರಿ ಇದು ನಿಮ್ಮ ಅಲ್ಪ ಜ್ಞಾನಕ್ಕೆ ತುಂಬಾ ಒಳ್ಳೆಯ ಉದಾಹರಣೆ. ಬಂಗಾಳದ ಪಂಚಾಯ್ತಿ ಕಾರ್ಯ ವಿಧಾನ ಮತ್ತು ಅದರ ಕೆಲಸದ ವಿಧಾನ ಇಡೀ ದೇಶಕ್ಕೆ ಮಾದರಿ ಆಗಿದೆಯೆಂದು ಕಮ್ಯುನಿಸ್ಟ್ ವಿರೋಧಿಗಳು ಸಹ ಹೇಳುತ್ತಿದ್ದಾರೆ. ಸಾಮಾನ್ಯ ಮನುಷ್ಯನೊಬ್ಬನಿಗೆ ನೇರವಾಗಿ ಅಧಿಕಾರದಲ್ಲಿ ಭಾಗವಹಿಸುವ ಅವಕಾಶ ಪ್ರಥಮ ಬಾರಿಗೆ ಮಾಡಿ ಕೊಟ್ಟವರೆಂದರೆ ಮಾರ್ಕ್ಸ್‌ವಾದಿಗಳು. ಪ. ಬಂಗಾಳದ ಜಿಲ್ಲಾ ಪರಿಷತ್ ಮಂಡಲ ಪಂಚಾಯ್ತಿ ಸದಸ್ಯರಲ್ಲಿ ಶೇ. 86 ಭಾಗ ಜನ 5 ಎಕರೆಗಿಂತ ಭೂಮಿ ಕಡಿಮೆ ಇರುವವರು. ಇನ್ನು ಭೂಸುಧಾರಣೆಯ ಬಗ್ಗೆ 1979 ರಿಂದೀಚೆಗೆ ಇಡೀ ದೇಶದಲ್ಲಿ ಭೂಹೀನರಿಗೆ ಹಂಚ್ಚಿದ ಭೂಮಿಯನ್ನು ಹಂಚಿರುವುದು 40 ಲಕ್ಷ ಎಕರೆ ಜಮೀನು. ಇದರಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಭೂಹೀನರಿಗೆ ಹಂಚಿರುವ ಭೂಮಿ 12 ಲಕ್ಷ ಎಕರೆಗಳು. ಈ ಭೂಮಿಯನ್ನು ಪಡೆದವರಲ್ಲಿ ಶೇಕಡ 60 ಜನ ಹರಿಜನ-ಗಿರಿಜನರು. ಇದು ಎಡರಂಗ ಸರ್ಕಾರ ಕೊಟ್ಟಿರುವ ಅಂಕಿ ಅಂಶಗಳಲ್ಲ, ಕೇಂದ್ರ ಸರ್ಕಾರ ಕೊಟ್ಟಿರುವ ಅಂಕಿ ಅಂಶಗಳು. ಸಿ.ಪಿ.ಐ.

(6 ನೇ ಪುಟ ನೋಡಿ)

ಡಿ. ವೈ. ಎಫ್. ಐ. – ಎಸ್. ಎಫ್. ಐ. ಸುದ್ದಿಗಳು

ಪಕ್ಕಲಡ್ಕ :

ಡಿ.ವೈ ಎಫ್.ಐ. ನ ಆರನೇ ವಾರ್ಷಿಕೋತ್ಸವದ ಅಂಗವಾಗಿ ದ. ಕನ್ನಡ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪಕ್ಕಲಡ್ಕದಲ್ಲಿ ನವೆಂಬರ್ 2 ರಂದು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ 28 ತಂಡಗಳು ಭಾಗವಹಿಸಿದ್ದವು. 100 ಕ್ಕೂ ಹೆಚ್ಚು ಮಹಿಳಾ ಸ್ಪರ್ಧಿಗಳು ಭಾಗವಹಿಸಿದ್ದರು.ಮಂಗಳೂರು ಅಪ್ಲೆಟಿಕ ಕ್ಲಬ್‌ನ ಕಾರ್ಯದರ್ಶಿ ಶ್ರೀ ಬೆಂಜಮಿನ್ ರವರು ಬಹುಮಾನ ವಿತರಣೆ ಮಾಡಿದರು.

ಮೈಸೂರು :

ಎಸ್.ಎಫ್.ಐ. ನ ಮೈಸೂರು ಜಿಲ್ಲಾ ಸಮಾವೇಶವು ನವೆಂಬರ 18 ರಂದು ನಡೆಯಿತು. ಜಿಲ್ಲೆಯ ವಿವಿಧ ಭಾಗಗಳಿಂದ 48 ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದರು. ಸಮಾವೇಶದಲ್ಲಿ ನೂತನ ಜಿಲ್ಲಾ ಸಮಿತಿಯನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಕಾ|| ಕೆ. ಬಸವರಾಜ, ಉಪಾಧ್ಯಕ್ಷರಾಗಿ ಕಾ|| ಮಕ್ಬುಲ್ ಅಹಮದ್, ಕಾರ್ಯದರ್ಶಿಯಾಗಿ ಕಾ|| ಎಸ್. ಆರ್. ಲೀಲಾವತಿ, ಸಹ ಕಾರ್ಯದರ್ಶಿಯಾಗಿ ಕಾ|| ಎಚ್. ಎಂ. ಮಹಾದೇವಪ್ಪ, ಖಜಾಂಚಿಯಾಗಿ ಕಾ|| ಸುಜಾತಾ ಅವರುಗಳು ಆಯ್ಕೆಯಾದರು.

ಹೊಸಪೇಟೆ :

ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ಕರ್ನಾಟಕ ಪ್ರದೇಶ ಹೊಟೇಲ್ ಮಾಲಿಕರ ಸಂಘವು ಮಾಡಿಕೊಂಡ ಒಪ್ಪಂದದ ಪ್ರಕಾರ ಹೊಸಪೇಟೆಯ ಹೊಟೇಲುಗಳಲ್ಲಿ ತಿಂಡಿ ದರಗಳನ್ನು ಇಳಿಸಬೇಕೆಂದು ಎಸ್. ಎಫ್. ಐ. ಡಿ.ವೈ ಎಫ್.ಐ. ನೇತೃತ್ವದಲ್ಲಿ ಇನ್ನಿತರ 16 ಪ್ರಗತಿಪರ ಸಂಘಟನೆಗಳು ಹೋರಾಟ ನಡೆಸುತ್ತಿದೆ. ಈ ಸಂಬಂಧವಾಗಿ ಜಂಟೀ ಹೋರಾಟ ಕ್ರಿಯಾ ಸಮಿತಿಯನ್ನು ರಚಿಸಲಾಗಿದ್ದು ಕಾ|| ಜಂಬಯ್ಯನಾಯಕ ಅದರ ಸಂಚಾಲಕ ರಾಗಿದ್ದಾರೆ.

ಈ ಹಿಂದೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದ್ದರೂ ಪ್ರಯೋಜನವಾಗದ ಕಾರಣ ನವೆಂಬರ 21 ರಿಂದ 23 ರ ವರೆಗೆ ಹೊಟೇಲುಗಳ ಎದುರು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿದೆ. ಈ ಬಗ್ಗೆ ಸಾರ್ವಜನಿಕರ ಪ್ರತಿಕ್ರಿಯೆ ಉತ್ಸಾಹದಾಯಕವಾಗಿದೆಯೆಂದು ವರದಿಯಾಗದೆ. ಕೆಲವು ಹೊಟೇಲ್ ಮಾಲಕರ ಹಠಮಾರಿತನದ ಧೋರಣೆಯನ್ನು ಪ್ರತಿಭಟಿಸಿ ಕೆಲವು ಹೊಟೇಲ್ ಮಾಲಿಕರು ಅವರ ಸಂಘಕ್ಕೆ ರಾಜೀನಾಮೆ ನೀಡಿ ಸ್ವಯಂ ಪ್ರೇರಣೆಯಿಂದ ತಿಂಡಿ ದರಗಳನ್ನು ಇಳಿಸಿದ್ದಾರೆಂದೂ ಸಹ ತಿಳಿದು ಬಂದಿದೆ.

ಅನಂತಶಯನ ಗುಡಿ :

ಡಿ.ವೈ.ಎಫ್.ಐ ನ ಸರ್ವ ಸದಸ್ಯರ ಸಭೆಯು ನವೆಂಬರ 19 ರಂದು ನಡೆಯಿತು. ಡಿ.ವೈ ಎಫ್.ಐ ನ ಹೊಸ ಸಮಿತಿಯನ್ನು ರಚಿಸಲಾಗಿದ್ದು ಅಧ್ಯಕ್ಷರಾಗಿ ಕಾ|| ಪಿ ವೆಂಕೋಬಣ್ಣ, ಉಪಾಧ್ಯಕ್ಷರಾಗಿ ಕಾ|| ಜೆ. ಪಿ. ರಾಮನಾಥ್ ಯು. ಗಣೇಶ, ಜಿ. ಗಾಳಪ್ಪ ಕಾರ್ಯದರ್ಶಿಯಾಗಿ ಕಾ|| ಕೆ. ಪಾಂಡುರಂಗ, ಸಹಕಾರ್ಯದರ್ಶಿಗಳಾಗಿ ಕಾ|| ಧರ್ಮಪ್ಪ, ಶಿವರಾಂ, ಟಿ. ಸಣ್ಣಸ್ವಾಮಿ ಆಯ್ಕೆಯಾಗಿದ್ದಾರೆ. ನವೆಂಬರ್ 20 ಮತ್ತು 21 ರಂದು ಡಿ.ವೈ ಎಫ್.ಐ ನ 6 ನೇ ವಾರ್ಷಿಕೋತ್ಸವದ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಲಾಯಿತು 21 ರಂದು ಬಹಿರಂಗ ಸಭೆ ನಡೆದು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ಹೊಸಕೋಟೆ :

ಡಿ.ವೈ.ಎಫ್.ಐ. ನ ಆಶ್ರಯದಲ್ಲಿ ನವೆಂಬರ್ 27 ರಂದು ಹೊಸಕೋಟೆ ತಾಲೂಕಿನ ಮುತ್ಕೂರಿನಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾ|| ಶಂಕರಪ್ಪ ಅಧ್ಯಕ್ಷತೆ ವಹಿಸಿದ್ದರು. ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮುನೇಗೌಡ ಮತ್ತು ಡಿ ವೈ.ಎಫ್.ಐ. ನ ರಾಜ್ಯ ಕಾರ್ಯದರ್ಶಿ ಕಾ|| ಶಿವರಾಂ, ಮುಖ್ಯ ಅತಿಥಿಗಳಾಗಿದ್ದರು.

ದೊಡ್ಡಬಳ್ಳಾಪುರ :

ಎಸ್. ಎಫ್. ಐ. ನ ಆಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನವಂಬರ 22 ರಂದು ದೊಡ್ಡಬಳ್ಳಾಪುರದ ಮಹಿಳಾ ಸಮಾಜದಲ್ಲಿ ಭಾವಗೀತೆ ಮತ್ತು ಜನಪದ ಗೀತೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅಲ್ಲಿನ ಎಲ್ಲಾ ಶಾಲಾ ಕಾಲೇಜುಗಳಿಂದ 36 ವಿದ್ಯಾರ್ಥಿ ವಿದ್ಯಾರ್ಥಿನಿಯರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಎಫ್ ಐ. ನ ರಾಜ್ಯ ಕಾರ್ಯದರ್ಶಿ ಕಾ|| ಎಸ್. ಆರ್. ಆರಾಧ್ಯ ವಹಿಸಿದ್ದರು. ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರಾದ ಕಾ|| ಟಿ. ಎನ್. ಶಿವಾರೆಡ್ಡಿ ಅವರು ಬಹುಮಾನ ವಿತರಣೆ ಮಾಡಿದರು.

ಮಂಗಳೂರು :

ಎಸ್.ಎಫ್.ಐ. ನ ದಕ್ಷಿಣ ಕನ್ನಡ ಜಿಲ್ಲಾ ಸಮಾವೇಶವು ನವೆಂಬರ 15 ರಂದು ಎಸ್. ಎಫ್. ಐ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾ|| ರತ್ನಾಕರನ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಿಸೆಂಬರ 7 ರಂದು ಮಂಗಳೂರಿನಲ್ಲಿ ನಡೆಯಲಿರುವ ಎಸ್. ಎಫ್. ಐ. ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಸಮಾವೇಶವನ್ನು ಉದ್ಘಾಟಿಸಿದ ಕಾ|| ಚಂದ್ರದಾಸ್‌ರವರು 1970 ರಲ್ಲಿ ತಿರುವನಂತಪುರದಲ್ಲಿ ನಡೆದ ಎಸ್. ಎಫ್.ಐ. ನ ಪ್ರಥಮ ರಾಷ್ಟ್ರ ಸಮ್ಮೇಳನದಲ್ಲಿ ತಾವು ಭಾಗವಹಿಸಿದ್ದನ್ನು ತಿಳಿಸಿ, ಕರ್ನಾಟಕದಲ್ಲೂ ಸಂಘಟನೆಯನ್ನು ಬಲಗೊಳಿಸಬೇಕೆಂದು ಕರೆ ನೀಡಿದರು.

ಸಮಾವೇಶವು ರಾಜ್ಯ.ಸಮಾವೇಶಕ್ಕೆ ಪ್ರತಿನಿಧಿಗಳನ್ನು ಹಾಗು ಹೊಸ ಜಿಲ್ಲೆ ಸಮಿತಿಯನ್ನು ಆಯ್ಕೆ ಮಾಡಿತು. ನೂತನ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ರತ್ನಾಕರ್ ಉಪಾಧ್ಯಕ್ಷರಾಗಿ ಅಶೋಕ ನ್ಪಶಾ, ಕಾರ್ಯದರ್ಶಿಯಾಗಿ ಸುನಿಲ್ ನಟೇಕರ್, ಜೊತೆ ಕಾರ್ಯದರ್ಶಿಯಾಗಿ ವಸಂತ ಆಚಾರ್ಯ ಖಜಾಂಚಿಯಾಗಿ ಕೆ.ಎಂ. ಕೃಷ್ಣಪ್ಪ ಹಾಗೂ 10 ಮಂದಿ ಸದಸ್ಯರು ಆಯ್ಕೆಯಾಗಿದ್ದಾರೆ.

ಪ್ರಶಂಸನೀಯ ಕಾರ್ಯ

ದಿನಾಂಕ 24–11–1986 ರಂದು ಮುಂಜಾನೆ 11 ಗಂಟೆಗೆ ರಿಕ್ಷಾಚಾಲಕರ ಸಂಘದ ವತಿಯಿಂದ ಸಿಂಧನೂರಿನಲ್ಲಿ ಅಂತರ್ ಜಾತಿಯ ವಿವಾಹವನ್ನು ಮಾಡಲಾಯಿತು.

ವಿವಾಹವಾದವರು ರಾಮಣ್ಣ, ಲಂಬಾಣಿ, ಇತನ ವಿವಾಹವು ರೇರಮ್ಮ, ಲಿಂಗಾಯತ ಇವಳೊಡನೆ ವಿವಾಹವು ಸಬ್ ರಿಜಿಸ್ಟರ್ ಅಫೀಸ್, ಸಿಂಧನೂರಿನಲ್ಲಿ ನೇರವೇರಿತು. ಅನಂತರ ಸಿಂಧನೂರಿನ ಪ್ರವಾಸಿಮಂದಿರದಲ್ಲಿ ಸಭೆಯನ್ನು ಸೇರಿಸಲಾಯಿತು. ಈ ಸಂದರ್ಭದಲ್ಲಿ ವಧು–ವರರಿಗೆ ಶುಭಾಶಯವನ್ನು ಕೋರಲಾಯಿತು. ಎಸ್.ಎಫ್.ಐ ನಗರ ಸಮಿತಿಯ ಅಧ್ಯಕ್ಷರಾದ ಕಾಂ|| ಶ್ರೀಕಾಂತ ಇವರು ತಮ್ಮ ಸಂಘದ ಪರವಾಗಿ ವಧು–ವರರಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ಕೋರಿದರು. ಅದೇ ರೀತಿಯಾಗಿ ಡಿ.ವೈ.ಎಫ್.ಐ. ನಗರ ಸಮಿತಿಯ ಸಂಚಾಲಕರಾದ ಕಾಂ|| ನರಸಿಂಹಪ್ಪ ಹಾಗೂ ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾದ ಕಾಂ. ಬಿ. ಲಿಂಗಪ್ಪ ಇವರು ತಮ್ಮ ಕ್ರಾಂತಿಕಾರಿ ಶುಭಾಶಯಗಳನ್ನು ಕೋರಿದರು.

ಸಭೆಯ ಅಧ್ಯಕ್ಷತೆಯನ್ನು ರಿಕ್ಷಾ ಚಾಲಕರ ಸಂಘದ ಅಧ್ಯಕ್ಷರಾದ ಕಾಂ| ಬಸವರಾಜ ಪಾ. ಪಾ. ವಕೀಲರು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಇಂತಹ ಅಂತರ್ ಜಾತಿಯ ವಿವಾಹಗಳು ನಡೆದರೆ (ಬೆಳೆದು ಬಂದರೆ) ಮಾತ್ರ ಜ್ಯಾತ್ಯಾತೀತ ರಾಷ್ಟ್ರವನ್ನಾಗಿ ಮಾಡಲು ಸಾಧ್ಯ ಮತ್ತು ದುಡಿಯುವ ವರ್ಗಕ್ಕೆ ಒಂದು ನಾಂದಿಯಾಗುತ್ತದೆಂದು ಅವರು ವಧುವರರಿಗೆ ಶುಭಕೋರುತ್ತಾ ತಮ್ಮ ಅಧ್ಯಕ್ಷತೆಯ ಭಾಷಣವನ್ನು ಮುಗಿಸಿದರು. ಮೊದಲಿಗೆ ರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಕಾಂ| ಬಾಷುಮಿಯಾ ಎಲ್ಲರಿಗೂ ಸ್ವಾಗತವನ್ನು ಕೋರಿದರು. ಕಾರ್ಯಕ್ರಮ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು. ಎಲ್ಲಾ ರಿಕ್ಷಾ ಚಾಲಕರು ಸಿಂಧನೂರಿನ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಮುಖಾಂತರ ಅವರ ಮನೆಗೆ ಕರೆದೊಯ್ದರು,

---

ಶಾಂತಿ, ಭದ್ರತೆ ಮತ್ತು ನಿಶರಿಸ್ತ್ರೀಕರಣಕ್ಕಾಗಿ ರಾಷ್ಟ್ರೀಯ ಅಂದೋಲನ ಸಮಿತಿ

ಜಾಗತಿಕ ಶಾಂತಿ ಸ್ಥಾಪನೆಗೆ ನೆರವಾಗಲು ಸರಕಾರ ಹಲವಾರು ಕ್ರಮ ಕೈಗೊಂಡಿದ್ದರೂ ಈ ಪ್ರಜ್ಞೆ ಭಾರತದಜನತೆಯಲ್ಲಿ ಅಷ್ಟಾಗಿ ಕಂಡುಬರಲಲ್ಲಿ ಈ ಕೊರತೆಯನ್ನು ನಿವಾರಿಸುವ ಬಗ್ಗೆ ಯೋಚಿಸುತ್ತಿದ್ದ ಬುದ್ಧಿ ಜೀವಿಗಳು, ವಿಜ್ಞಾನಿಗಳು, ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು ಹಾಗೂ ಇತರ ಸಾಮೂಹಿಕ ಸಂಘಟನೆಗಳ ಸಾಮ್ರಾಜ್ಯಶಾಹಿ–ವಿರೋಧಿ ವಿಭಾಗಗಳು ಒಂದು ವಿಶಾಲ ತಳಹದಿಯ ಆಂದೋಲನವನ್ನು ಅರಂಭಿಸಲು ನಿರ್ಧರಿಸಿವೆ. ಮೇಲೆ ಹೇಳಿದ ರಾಷ್ಟ್ರೀಯ ಆಂದೋಲನ ಸಮಿತಿ ಈ ಉದ್ದೇಶದಿಂದ ಸ್ಥಾಪನೆಗೊಂಡಿರುವ ಸಂಘಟನೆ. ನವಂಬರ್ 24 ರಂದು ದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಸಭೆ ಈ ಸಮಿತಿಯ ಮೊದಲ ಕಾರ್ಯಕ್ರಮ. ಈ ಸಭೆಯಲ್ಲಿ ಮಾತನಾಡಿದ ಭಾಷಣಕಾರರು ಒಬ್ಬರಾದ ಮೇಲೊಬ್ಬರಂತೆ ಗೊರ್ಬಚೆವ್ ರವರ ಭೇಟಿ ಭಾರತ–ಸೋವಿಯೆಟ್ ಮೈತ್ರಿಯನ್ನು ಮತ್ತಷ್ಟು ಆಳಗೊಳಿಸುವಲ್ಲಿ, ಜಗತ್ತಿನ ಶಾಂತಿ ಶಕ್ತಿಗಳನ್ನು ಬಲಗೊಳಿಸುವಲ್ಲಿ ಮತ್ತು ದೇಶದ ಭದ್ರತೆ, ಸಾರ್ವಭೌಮತೆ ಹಾಗೂ ಸಮಗ್ರತೆಗೆ ಬಂದಿರುವ ಬಂದಿರುವ ಸವಾಲುಗಳನ್ನು ಎದುರಿಸುವಲ್ಲಿ, ಅಗಾಧ ನೆರವು ನೀಡುತ್ತದೆ ಎಂದು ಸ್ಪಷ್ಟ ಅಭಿಪ್ರಾಯ ಪಟ್ಟರು.

ಸಿ. ಪಿ. ಐ. (ಎಂ) ಪರವಾಗಿ ಕಾಂ. ಸುರ್ಜಿತ್ ಈ ಸಭೆಯಲ್ಲಿ ಮಾತನಾಡಿದರು. ಭಾಗವಹಿಸಿದ್ದ ಇತರ ಮುಖಂಡರೆಂದರೆ ಮಾಜಿ ಕೇಂದ್ರ ಮಂತ್ರಿ ವಿ. ಎನ್. ಗಾಡ್ಗಿಳ್ ರಾಜೇಶ್ವರರಾವ್ (ಸಿ. ಪಿ. ಐ.) ಬಹುಗುಣ (ಲೋಕದಳ), ಪ್ರೊ. ಲಕ್ಷ್ಮಣ (ತೆಲುಗು ದೇಶಂ), ಚಿತ್ತ ಬಸು (ಫಾರ್ವರ್ಡ್ ಬ್ಲಾಕ್). ನಿವೃತ್ತ ನ್ಯಾಯ ಮೂರ್ತಿ ಕೃಷ್ಣ ಅಯ್ಯರ್ ಮುಂತಾದವರು.

ಜನವರಿ ಎರಡನೇ ವಾರದಲ್ಲಿ ದೆಹಲಿಯಲ್ಲಿ ಒಂದು ಶಾಂತಿ ಸಮಾವೇಶ ನಡೆಸಲು ನಂತರ ರಾಜ್ಯ ಸಮಾವೇಶಗಳಲ್ಲಿ ಶಾಂತಿಗಾಗಿ ಯುವಕರನ್ನೂ ವಿದ್ಯಾರ್ಥಿಗಳನ್ನು, ಕಾರ್ಮಿಕ ಸಂಘಗಳನ್ನು ಹಾಗೂ ಇತರ ಜನ ವಿಭಾಗಗಳನ್ನು ಒಟ್ಟು ಗೂಡಿಸಲು ಸಮಿತಿ ನಿರ್ಧರಿಸಿದೆ.

ಶಾಂತಿಗಾಗಿ ಕಾತರಿಸಿದ ಜನರಿಂದ ಅಪೂರ್ವ ಸ್ವಾಗತ

'ಅವರು ಬಂದರು, ಜನಮನವನ್ನು ಗೆದ್ದರು'

ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಮಿಖ್ಯಾಲ್ ಗೊರ್ಬಚೆವ್ ಅವರ ನಾಲ್ಕು ದಿನಗಳ ಭಾರತ ಭೇಟಿ ಅಭೂತ ಪೂರ್ವ ಯಶಸ್ಸು ಪಡೆದಿದೆ ಯೆಂದು ಎಲ್ಲರೂ ಏಕಕಂಠದಿಂದ ಒಪ್ಪಿಕೊಳ್ಳುವಂತಾಗಿದೆ. ಸೋವಿಯೆತ್ ಒಕ್ಕೂಟದ ಬಗ್ಗೆ ಸದಭಿಪ್ರಾಯ ಎಂಬುದೇನೂ ಇಲ್ಲದವರು ಕೂಡಾ. ನವಂಬರ್ 25 ರಂದು ಮಿಖ್ಯಾಲ್ ಗೊರ್ಬಚೆವ್, ಅವರ ಪತ್ನಿ ರೈಸಾ ಗೊರ್ಬಚೆವಾ ಹಾಗೂ ತಂಡದ ಇತರ ಸದಸ್ಯರು ಏರೋಪ್ಲೋಟ್ ವಿಮಾನದಲ್ಲಿ ದೆಹಲಿಗೆ ಬಂದಿಳಿದಾಗ ಅಧಿಕೃತವಾಗಿ, ಹಾಗೂ ಅದರ ಕಟ್ಟುಪಾಡುಗಳನ್ನು ಮೀರಿ ಭಾರತದ ಜನತೆಯಿಂದ ದೊರೆತ ಹೃತ್ಪೂರ್ವಕ ಸ್ವಾಗತ ಇತ್ತೀಚಿನ ಹಲವು ವರ್ಷಗಳಲ್ಲಿ ಯಾವ ವಿದೇಶೀ ಗಣ್ಯ ಮುಖಂಡರಿಗೂ ದೊರೆತಿಲ್ಲ ಎಂದು ಬೂರ್ಜ್ವಾ ಪತ್ರಿಕೆಗಳು ಕೂಡಾ ವರ್ಣಿಸಿವೆ. ಲಕ್ಷಾಂತರ ಮಂದಿ ಗೊರ್ಬಚೆವ್ ವಿಮಾನ ದೆಹಲಿ ತಲುಪುವ ಐದಾರು ಗಂಟೆಗಳ ಮೊದಲೇ ಅವರ ಬರುವ ದಾರಿಯ ಇಕ್ಕೆಲಗಳಲ್ಲೂ ಕಾದು ನಿಂತಿದ್ದರು. ಹೀಗೆ ಕಾಂ. ಗೊರ್ಬಚೆವ್‌ರವರಿಗೆ ಭಾರತೀಯ ಜನತೆಯ ಪರವಾಗಿ ಹೃತ್ಪೂರ್ವಕ ಸ್ವಾಗತ ನೀಡಿದವರಲ್ಲಿ ಅತ್ಯಂತ ದೊಡ್ಡ ಹಾಗೂ ಸುಸಂಘಟಿತ ಗುಂಪೆಂದರೆ ದೌಲಾಕುವಾಂದಲ್ಲಿನ ಸಿ.ಪಿ.ಐ. (ಎಂ) ನೇತೃತ್ವದ ಗುಂಪು. ಪರಮಾಣು ಶಸ್ತ್ರಾಸ್ತ್ರಗಳನ್ನು, ತಾರಾಸಮರವನ್ನು, ರೇಗನ್ ಯುದ್ಧೋನ್ಮಾದವನ್ನು ವಿರೋಧಿಸುವ, ಭಾರತ-ಸೋವಿಯೆತ್ ಮೈತ್ರಿ ಜಾಗತಿಕ ಶಾಂತಿ ಹಾಗೂ ಸ್ಥಿರತೆಯ ಒಂದು ಪ್ರಮುಖ ಅಂಗವೆಂದು ಸಾರುವ, ಆರು ದೇಶಗಳ ದೆಹಲಿ ಘೋಷಣೆಗೆ ಹಾಗೂ ಆಫ್ರಿಕಾ ಶಾಂತಿ ಮತ್ತು ನಿಶ್ಶಸ್ತ್ರೀಕರಣಕ್ಕೆ ಸೋವಿಯೆತ್ ಬೆಂಬಲವನ್ನು ಸ್ವಾಗತಿಸುವ ಅಸಂಖ್ಯ ಪೋಸ್ಟರುಗಳನ್ನು ಪ್ರದರ್ಶಿಸುತ್ತಾ ಹಲವಾರು ಕಾರ್ಯಕರ್ತರು ಕಾಂ. ಗೊರ್ಬಚೆವ್‌ರವರಿಗೆ ಹಾಗೂ ಅವರ ತಂಡದವರಿಗೆ ಸ್ವಾಗತ ಕೋರಿದರು.

ಈ ಐತಿಹಾಸಿಕ ಭೇಟಿಯ ಪ್ರಮುಖ ಪರಿಣಾಮಗಳೆಂದರೆ 2800 ಕೋಟಿ ರೂ. ಮೌಲ್ಯದ ಸೋವಿಯೆತ್ ನೆರವು ಒಪ್ಪಂದ, ಭಾರತದ ರಕ್ಷಣಾ ವ್ಯವಸ್ಥೆ ಬಲಪಡಿಸುವ ಬಗ್ಗೆ ಕೆಲವು ಮಹತ್ವದ ವಿಚಾರ-ವಿನಿಮಯ, ಎರಡು ದೇಶಗಳ ನಡುವೆ ಈ ಶತಮಾನದ ಅಂತ್ಯದವರೆಗೆ ವೈಜ್ಞಾನಿಕ ಹಾಗೂ ತಾಂತ್ರಿಕ ಸಂಬಂಧಗಳನ್ನು ಮತ್ತಷ್ಟು ಉಚ್ಛಮಟ್ಟಕ್ಕೊಯ್ಯುವ ಬಗ್ಗೆ ಎರಡು ದೇಶಗಳ ವೈಜ್ಞಾನಿಕ ಹಾಗೂ ತಾಂತ್ರಿಕ ನಿಯೋಗಗಳ ನಡುವೆ ಆಳವಾದ ವಿಚಾರ-ವಿಮರ್ಶೆ ಹಾಗೂ ಪರಸ್ಪರ ಸಾಂಸ್ಕೃತಿಕ ಸಂಬಂಧಗಳನ್ನು ಗಟ್ಟಿಗೊಳಿಸಲು 1987-88 ರಲ್ಲಿ ಭಾರತದಲ್ಲಿ ಸೋವಿಯೆತ್ ಒಕ್ಕೂಟ ಉತ್ಸವ ಹಾಗೂ ಸೋವಿಯೆತ್ ಒಕ್ಕೂಟದಲ್ಲಿ ಭಾರತ ಉತ್ಸವ ನಡೆಸುವ ನಿರ್ಧಾರ.

ಇದಲ್ಲದೆ ನವಂಬರ್ 27 ರಂದು ಭಾರತದ ಸಂಸತ್ತನ್ನು ಉದ್ದೇಶಿಸಿ ಮಾಡಿದ ಭಾಷಣ ಸಂಸತ್ ಸದಸ್ಯರ ಆಚಾರ ಮೆಚ್ಚುಗೆ ಗಳಿಸಿದರೆ (31 ನಿಮಿಷಗಳ ಭಾಷಣದಲ್ಲಿ 20 ಬಾರಿ ಕಿವಿಗಡಚಿಕ್ಕುವ ಚಪ್ಪಾಳೆ) ಅದೇ ದಿನ ಜಾಗತಿಕ ಶಾಂತಿ ಹತ್ತು ಸೂತ್ರಗಳ ದೆಹಲಿ ಘೋಷಣೆ ಸಮಸ್ತ ಜಗತ್ತಿನ ಶಾಂತಿಪ್ರಿಯರ ಗಮನ ಸೆಳೆಯಿತು. ಭಾರತದ ಸಂಸತ್ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ಕಾಂ. ಗೊರ್ಬಚೆವ್ ರೇಗನ್‌ರ "ತಾರಸಮರ"ದ ಯೋಜನೆಗೆ ಪ್ರತಿಯಾಗಿ "ತಾರಶಾಂತಿ"ಯ ಪ್ರಸ್ತಾಪಗಳನ್ನು ಮಂಡಿಸಿದರು. ಇತರ ದೇಶಗಳೊಂದಿಗೆ ಜಂಟಿಯಾಗಿ ಬಾಹ್ಯಾಕಾಶದ ಶಾಂತಿಯುತ ಸಂಶೋಧನೆಗಳಿಗಾಗಿ ಒಂದು ಸಂಸ್ಥೆಯ ಸ್ಥಾಪನೆ, ಮೂರನೇ ಜಗತ್ತಿನ ದೇಶಗಳ ಬಾಹ್ಯಾಕಾಶಯಾತ್ರಿಗಳ ತರಬೇತಿಗೆ ಒಂದು ಶಾಲೆ (ಇದನ್ನು ಭಾರತ ಬಯಸಿದರೆ ಭಾರತದಲ್ಲೇ ಸ್ಥಾಪಿಸಲು ಸೋವಿಯೆತ್ ಒಕ್ಕೂಟ ಬೆಂಬಲ) ಇತ್ಯಾದಿ ಈ ಪ್ರಸ್ತಾಪಗಳನ್ನು ಮಂಡಿಸುತ್ತಾ ಬಾಹ್ಯಾಕಾಶ ಸಮಸ್ತ ಮಾನವ ಕುಲಕ್ಕೆ ಸೇರಿದ್ದು ಅದನ್ನು ಯಾರು ಹೇಗೆ ಬಳಸುತ್ತಾರೆ ಎಂಬುವರ ಬಗ್ಗೆ ಯಾವನೊಬ್ಬನೂ ಕೂಡಾ ಅಸಡ್ಡೆ ಮಾಡಬಾರದು ಎಂದು ಎಚ್ಚರಿಸಿದರು. ಶಾಂತಿಯ ಕೋಟೆಗಳಾದ ವಿಶ್ವಸಂಸ್ಥೆ ಹಾಗೂ ಅಂತಹ ಇತರ ಸಂಸ್ಥೆಗಳನ್ನು ಬಲಪಡಿಸುವುದಾಗಿ, ಅವುಗಳ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಸೋವಿಯೆತ್ ಒಕ್ಕೂಟ ನೆರವು ನೀಡಲು ಸಿದ್ಧ ಎಂದು ಕಾಂ. ಗೊರ್ಬಚೆವ್ ಘೋಷಿಸಿದರು.

ಕಾಂ. ಇ.ಎಂ.ಎಸ್. ರವರ ನೇತೃತ್ವದ ಸಿ.ಪಿ.ಐ.(ಎಂ) ನಿಯೋಗ ಕಾಂ. ಗೊರ್ಬಚೆವ್‌ರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿತು. ಪಾಲಿಟ್ ಬ್ಯೂರೋ ಸದಸ್ಯರುಗಳಾದ ಕಾಂ. ಬಸವ ಪುನ್ನಯ್ಯ ಹಾಗೂ ಕಾಂ. ಸುರ್ಜಿತ್ ನಿಯೋಗದ ಇತರ ಸದಸ್ಯರು.

ಭಾರತದಂತಹ ದೇಶಗಳು ಸಮಾಜವಾದೀ ಶಕ್ತಿಯೊಂದಿಗೆ ಹೊಂದಿರುವ ಸಂಬಂಧ ಹೇಗೆ ಸಾಮ್ರಾಜ್ಯಶಾಹೀ ಶಕ್ತಿಗಳೊಂದಿಗಿನ ಸಂಬಂಧಕ್ಕಿಂತ ಮೂಲಭೂತವಾಗಿ ಭಿನ್ನವಾಗಿರುತ್ತದೆ ಎಂಬುದನ್ನು ಮನಗಾಣಿಸಿ ಕೊಟ್ಟ ಸೋವಿಯೆತ್ ಒಕ್ಕೂಟ ಹಾಗೂ ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವವರ ಜೊಳ್ಳುತನವನ್ನು, ದುರ್ಬುದ್ಧಿಯನ್ನು ಮತ್ತೊಮ್ಮೆ ಬಯಲಿಗೆಳೆದ ಒಂದು ಚಾರಿತ್ರಿಕ ಭೇಟಿಯಿದು. ○

"ಆರು ವಾರಗಳ ಹಿಂದೆ ರೆಕ್ಯಾವಿಕ್‌ನಲ್ಲಿ ಜಗತ್ತು ನೋಡಿದ್ದು ದಿಗಂತದಲ್ಲಿನ ಪರಮಾಣು ಅಸ್ತ್ರಗಳಿಂದ ಮುಕ್ತವಾದ ವಿಶ್ವದ ಬಿಸಿಲುಗುದುರೆಯನ್ನಲ್ಲ, ನಮ್ಮ ಕೈಯಳವಿನೊಳಗೇ ಇರುವ ಒಂದು ವಾಸ್ತವತೆಯನ್ನು ಇದನ್ನು ಎರಡೂ ಪಕ್ಷಗಳು ನಾಳೆನೇ ಸಾಧಿಸಲು ಸಾಧ್ಯ. ಆದರೆ ಅದಕ್ಕೆ ಅವರಲ್ಲಿ ಬಲವಾದ ಇಚ್ಛೆ ಹಾಗೂ ಜವಾಬ್ದಾರಿ ಭಾವನೆ ಬೇಕಷ್ಟೆ. ಎಸ್. ಡಿ. ಐ. ನಿಂದಾಗಿ ಒಂದು ಒಪ್ಪಂದ ಸಾಧ್ಯವಾಗಲಿಲ್ಲ ಎಂಬುದು ಖೇದಕರ. ಆದರೆ ಮಾನವಕುಲ ಇದನ್ನು ಸುಮ್ಮನೇ ಒಪ್ಪಿಕೊಳ್ಳುವುದೆಂದು ನನಗನಿಸುವುದಿಲ್ಲ".

ಸಂಸತ್ತಿನಲ್ಲಿ ಮಿಖ್ಯಾಲ್ ಗೊರ್ಬಚೆವ್.

ವಿಶ್ವಶಾಂತಿಗಾಗಿ ಹತ್ತು ಸೂತ್ರಗಳ ದಿಲ್ಲಿ ಘೋಷಣೆ

ನವಂಬರ್ 27 ರ ಬೆಳಿಗ್ಗೆ ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಗೊರ್ಬಚೆವ್ ಹಾಗೂ ಭಾರತದ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು ಸಹಿ ಹಾಕಿದ ಘೋಷಣೆ ಪರಮಾಣು ಯುಗದಲ್ಲಿ ಮಾನವ ಕುಲದ ಉಳಿವಿನ ಭರವಸೆ ನೀಡುವ ಒಂದು ಹೊಸ ರಾಜಕೀಯ ವಿಚಾರದ ವಿಶ್ವದ ಬಗ್ಗೆ ಒಂದು ಹೊಸ ಪರಿಕಲ್ಪನೆಯ ಅಗತ್ಯವನ್ನು ಒತ್ತಿ ಹೇಳಿ ಇದಕ್ಕಾಗಿ ಹತ್ತು ಸೂತ್ರಗಳನ್ನು ವಿಶ್ವದ ಮುಂದಿಟ್ಟಿದೆ.

"ನಮ್ಮೆರಡು ಮಿತ್ರ ದೇಶಗಳ ಒಂದು ನೂರು ಕೋಟಿಗೂ ಮೀರಿದ ಗಂಡಸರು, ಹೆಂಗಸರು ಹಾಗೂ ಮಕ್ಕಳ ಪರವಾಗಿ" ಈ ಎರಡು ಮುಖಂಡರು ಮಂಡಿಸಿದ ಹತ್ತು ಸೂತ್ರಗಳು ಹೀಗಿವೆ.

1. ಶಾಂತಿಯುತ ಸಹಬಾಳ್ವೆಯ ಅಂತರಾಷ್ಟ್ರೀಯ ಸಂಬಂಧಗಳ ಸಾರ್ವತ್ರಿಕ ನಿಯಮವಾಗಬೇಕು.

2. ಮಾನವ ಜೀವಅಂತ್ಯತ ಶ್ರೇಷ್ಠ ಎಂಬುದನ್ನು ಮಾನ್ಯ ಮಾಡಬೇಕು.

3. ಅಹಿಂಸೆ ಸಮುದಾಯ ಜೀವನದ ಅಧಾರವಾಗಬೇಕು.

4. ಭಯ ಹಾಗೂ ಸಂಶಯದ ಜಾಗದಲ್ಲಿ ಪರಸ್ಪರ ಅರಿವು ಹಾಗೂ ವಿಶ್ವಾಸ ಮೂಡಬೇಕು.

5- ಪ್ರತಿಯೊಂದು ಪ್ರಭುತ್ವದ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯದ ಹಕ್ಕನ್ನು ಮಾನ್ಯ ಮಾಡಬೇಕು ಮತ್ತು ಗೌರವಿಸಬೇಕು.

6. ಶಸ್ತ್ರಾಸ್ತ್ರಗಳ ಮೇಲೆ ವೆಚ್ಚಮಾಡುವ ಸಂಪನ್ಮೂಲಗಳನ್ನು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಬಳಸಬೇಕು.

7. ವ್ಯಕ್ತಿಯ ಸಮಗ್ರ ಸಂಪೂರ್ಣ ಬೆಳವಣಿಗೆಗೆ ಅನುಕೂಲ ಪರಿಸ್ಥಿತಿಗಳ ಭರವಸೆ ನೀಡಬೇಕು.

8. ಮಾನವ ಕುಲದ ಭೌತಿಕ ಹಾಗೂ ಬೌದ್ಧಿಕ ಸಾಮರ್ಥ್ಯವನ್ನು ವಿಶ್ವದ ಸಮಸ್ಯೆಗಳನ್ನು ಪರಿಹರಿಸಲು ಬಳಸಬೇಕು.

9, "ಭಯೋತ್ಪಾದನೆಯ ಸಮತೋಲ" ತೊಲಗಿ ಅದರ ಜಾಗದಲ್ಲಿ ಸಮಗ್ರ ಅಂತರಾಷ್ಟ್ರೀಯ ಭದ್ರತೆ ಬರಬೇಕು.

10. ಪರಮಾಣು ಶಸ್ತ್ರಗಳಿಂದ ಮುಕ್ತವಾದ ಹಾಗೂ ಅಹಿಂಸಾತ್ಮಕ ಜಗತ್ತಿನ ನಿರ್ಮಾಣವಾಗಬೇಕಾದರೆ ನಿಶ್ಶಸ್ತ್ರೀಕರಣಕ್ಕಾಗಿ ತಕ್ಷಣದ ನಿರ್ದಿಷ್ಟ ಕಾರ್ಯಕ್ರಮ ಅಗತ್ಯ.

ಇದನ್ನು ಈ ಶತಮಾನದ ಅಂತ್ಯದೊಳಗೆ ಪರಮಾಣು ಶಸ್ತ್ರ ಭಂಡಾರಗಳನ್ನು ಪೂರ್ಣವಾಗಿ ನಾಶಗೊಳಿಸುವುದು, ಬಾಹ್ಯಾಕಾಶದಲ್ಲಿ ಎಲ್ಲಾ ಶಸ್ತ್ರಾಸ್ತ್ರಗಳನ್ನು ಪ್ರತಿಬಂಧಿಸುವುದು. ಪರಮಾಣು ಅಸ್ತ್ರ ಪರೀಕ್ಷೆಗನ್ನು ನಿರ್ಬಂಧಿಸುವುದು, ಸಾಮೂಹಿಕ ವಿನಾಶದ ಹೊಸ ಅಸ್ತ್ರಗಳ ಬೆಳವಣಿಗೆಯನ್ನು ನಿರ್ಬಂಧಿಸುವುದು. ರಾಸಾಯನಿಕ ಅಸ್ತ್ರಗಳನ್ನು ಪ್ರತಿಬಂಧಿಸಿ, ಅವುಗಳ ಭಂಡಾರವನ್ನು ನಾಶಗೊಳಿಸುವುದು ಹಾಗೂ ಪಾರಂಪರಿಕ ಶಸ್ತ್ರಗಳು ಹಾಗೂ ಸೇನಾಪಡೆಗಳ ಮಟ್ಟವನ್ನು ಇಳಿಸುವುದು ಈ ವಿಷಯಗಳ ಮೇಲೆ ಒಪ್ಪಂದಗಳನ್ನು ಮಾಡಿಕೊಳ್ಳುವುದರ ಮೂಲಕ ಸಾಧಿಸಬಹುದು.

ಆರ್ಥಿಕ ಒಪ್ಪಂದ : 35 ವರ್ಷಗಳ ಸಹಕಾರದ ಹೊಸ ಅಧ್ಯಾಯ

ಕಾಮ್ರೇಡ್ ಗೋರ್ಬಚೆವ್‌ರ ಭಾರತ ಯಾತ್ರೆಯ ಮುಖ್ಯ ಘಟನೆಗಳಲ್ಲೊಂದು ಆರ್ಥಿಕ ಮತ್ತು ತಾಂತ್ರಿಕ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದ್ದು. ಈ ಒಪ್ಪಂದದ ಪ್ರಕಾರ ಸೋವಿಯೆತ್ ಯೂನಿಯನ್ ಭಾರತಕ್ಕೆ 150 ಕೋಟಿ ರೂಬಲ್ (ಅಥವಾ 2800 ಕೋಟಿ ರೂ)ನಷ್ಟು ಮೊತ್ತದ ಸಾಲ ನೀಡುವುದು. ಈ ಸಾಲವನ್ನು ಮುಖ್ಯವಾಗಿ–2400 ಎಮ್. ವಿ. ನ. ಜಲವಿದ್ಯುತ್ ಆಗರ (ಟಿಹ್ರಿ–ಉ. ಪ್ರದೇಶದಲ್ಲಿ)ದ ನಿರ್ಮಾಣ, ಬೊಕಾರೊ ಉಕ್ಕಿನ ಕಾರ್ಖಾನೆಯ ಆಧುನೀಕರಣ, ಭೂಗತ ಗಣಿಗಳ ಸ್ಥಾಪನೆ ಮತ್ತು ಪ. ಬಂಗಾಳದ ತೀರದಲ್ಲಿ ಹೈಡ್ರೋಕಾರ್ಬನುಗಳ ಶೋಧಕ್ಕೆ ಉಪಯೋಗಿಸಲಾಗುವುದು. ಈ ಸಾಲದಲ್ಲಿ 120 ಕೋಟಿ ರೂಬಲ್‌ಗೆ ವಾರ್ಷಿಕ ಬಡ್ಡಿ ದರ ಕೇವಲ ಶೇಕಡಾ 2.5 ಇರುತ್ತದೆ, ಇದನ್ನು 17 ವರ್ಷಗಳಲ್ಲಿ ಸಮ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡಬಹುದು.

ಈ ಒಪ್ಪಂದದೊಂದಿಗೆ ಈಗಾಗಲೇ 35 ವರ್ಷದಷ್ಟು ಹಳೆಯ ಭಾರತ—ಸೋವಿಯೆತ್ ಸಂಬಂಧ ಇನ್ನು ದೃಢವಾಗಿ ಮುಂದುವರಿದಂತಾಗಿದೆ. 35 ವರ್ಷಗಳ ಹಿಂದೆ ಭಾರತ ಭಾರಿ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶದಿಂದ ಪಾಶ್ಚಿಮಾತ್ಯ ರಾಷ್ಟ್ರಗಳ ಎದುರು ಸೆರಗೊಡ್ಡಿ ನಿಂತಾಗ ಆ ರಾಷ್ಟ್ರಗಳ "ಮತ್ತೆ ಬಾ" "ನಾಳೆ ಬಾ" ಧೋರಣೆಯಿಂದ ಬೇಸತ್ತ ಭಾರತದ ಆಳುವ ಬೂರ್ಜ್ವಾ ವರ್ಗ ಸೋವಿಯೆಟ್ ಯೂನಿಯನ್‌ನ ಮೊರೆ ಹೊಕ್ಕಿತು. ಭಿಲಾಯಿ ಉಕ್ಕಿನ ಕಾರ್ಖಾನೆ ರಾಂಚಿಯ ಭಾರಿ ಇಂಜಿನೀಯರಿಂಗ್ ಕಾರ್ಖಾನೆ ನಿರ್ಮಾಣಕ್ಕೆ ಸಹಾಯ ಮತ್ತು ಸಾಲ ನೀಡಿಕ್ಕೆಯಿಂದ ಈ ಸಂಬಂಧ ಆರಂಭವಾಯಿತು. ಅಂದಿನಿಂದ ಇಂದಿನವರೆಗೆ ಭಾರತ-ಸೋವಿಯೆಟ್ ವಾಣಿಜ್ಯ ಭಾರಿಯಾಗಿ ಬೆಳೆದಿದೆ. 60 ರ ದಶಕದಲ್ಲಿ ವ್ಯಾಪಾರ ಶೇಕಡಾ 15 ರಷ್ಟು ವಾರ್ಷಿಕವಾಗಿ ಏರಿದರೆ, 70 ರ ದಶಕದ ಪೂರ್ವಾರ್ಧದಲ್ಲಿ ಶೇಕಡಾ 21 ಕೆ ಮತ್ತು ಉತ್ತರಾರ್ಧದಲ್ಲಿ ಶೇಕಡಾ 52ರ. ದರದಲ್ಲಿ ಏರಿತು. 1980–81 ರಲ್ಲಿ 2240 ಕೋಟಿ ರೂ. ಇದ್ದದ್ದು 1985–86 ರ ಹೊತ್ತಿಗೆ 4650 ಕೋಟಿ ರೂ. ಗೆ ಏರಿದೆ ಇದನ್ನು 1991–92 ರ ಸಾಲಿಗೆ 10,000 ಕೋಟಿ ರೂ. ನಷ್ಟು ಏರಿಸಬೇಕೆಂದು ಯೋಜಿಸಲಾಗಿದೆ. ಈ ವರೆಗೆ ಸುಮಾರು 70 ಭಾರಿ ಕೈಗಾರಿಕೆಗಳನ್ನು ನಿರ್ಮಾಣ ಮಾಡಲು ಸೋವಿಯೆತ್‌ಗಳು ಸಹಾಯ ಮಾಡಿದ್ದಾರೆ.

ಸೋವಿಯೆತ್ ಸಹಾಯದ ವಿಶೇಷತೆ

ಭಾರತಕ್ಕೆ ವಿದೇಶಿ ಸಹಾಯ ಸಾಲ ದೊರೆತದ್ದು ಸೋವಿಯೆತ್ ಯೂನಿಯನ್‌ನಿಂದ ಮಾತ್ರವಲ್ಲ. ಪಾಶ್ಚಿಮಾತ್ಯ ದೇಶಗಳಿಗೂ ಸಹಾಯ, ಸಾಲ ನೀಡಿವೆ. ಆದರೆ ಸೋವಿಯೆತ್‌ಗಳ ಸಹಾಯದ ಸ್ವರೂಪ ವಿಶಿಷ್ಟವಾದದ್ದು. ಭಾರತಕ್ಕೆ ಬಹಳ ಪ್ರಯೋಜನಕಾರಿಯಾದದ್ದು.

ಮೊದಲನೆಯದಾಗಿ ಸೋವಿಯೆಟ್ ಸಹಾಯ ಭಾರತಕ್ಕೆ ಭದ್ರ ಕೈಗಾರಿಕೆ ತಳಹದಿ ಒದಗಿಸಬಲ್ಲ, ಮೂಲಭೂತ ಕ್ಷೇತ್ರಗಳಲ್ಲಿ ಕೊಡಲಾಗಿದೆ, ಈ ಕ್ಷೇತ್ರಗಳಲ್ಲಿ ಪಾಶ್ಚಿಮಾತ್ಯ ದೇಶಗಳು ತಂತ್ರಜ್ಞಾನ ನೀಡಲು ನಿರಾಕರಿಸಿದ್ದಲ್ಲದೆ, ಇದು ಭಾರತಕ್ಕೆ ಅಗತ್ಯವಿಲ್ಲವೆಂದು ವಾದಿಸುತ್ತಿದ್ದವು. ಈ ಮೂಲಭೂತ ಕ್ಷೇತ್ರಗಳು ಉಕ್ಕು, ವಿದ್ಯುತ್ ಶಕ್ತಿ ಉತ್ಪಾದನೆ ಮತ್ತು ತೈಲ ಈ ಕ್ಷೇತ್ರಗಳಲ್ಲಿ ನೆಜವಾದ ತಂತ್ರಜ್ಞಾನ ವರ್ಗಾವಣೆಯಾಗಿದೆ.

ಮೂರನೇಯದಾಗಿ ಎರಡು ದೇಶಗಳ ನಡುವಣ ಎಲ್ಲಾ ವ್ಯಾಪಾರದಲ್ಲಿ ರೂಪಾಯಿ ಪಾವತಿಯನ್ನು ಒಪ್ಪಿಕೊಂಡಿದ್ದು. ಅಂದರೆ ಸೋವಿಯೆತ್ ಉತ್ಪನ್ನ, ಮತ್ತು ಸೇವೆಗಳಿಗೆ ದುಬಾರಿ ವಿದೇಶಿ ವಿನಿಮಯದಲ್ಲಿ ಹಣ ಪಾವತಿ ಮಾಡುವ ಅಗತ್ಯವಿರಲಿಲ್ಲ.

ಕೊನೆಯದಾಗಿ ಎಲ್ಲ ಸಹಾಯ ಧನದ ಮರು ಪಾವತಿಯನ್ನು ರಫ್ತಿನ ರೂಪದಲ್ಲಿ ಮಾಡುವ ಅವಕಾಶವಿದೆ. ಅಂದರೆ ಸಾಲದ ಮರುಪಾವತಿಯ ಹೊರೆ ವ್ಯಾಪಾರವಾಗಿ ಪರಿವರ್ತಿತವಾಗಿ ನಮ್ಮ ದೇಶದ ಆರ್ಥಿಕತೆಗೆ ಕುಮ್ಮಕ್ಕು ಕೊಡುತ್ತದೆ.

ಇವೆಲ್ಲಾ (ಮುಖ್ಯವಾಪರೂ) ಬರಿಯ ಆರ್ಥಿಕ ಅಂಶಗಳಲ್ಲದೆ, ಪಾಶ್ಚಿಮಾತ್ಯ ರಾಷ್ಟ್ರಗಳ ಕೈ ತಿರಿಚುವ ಸಂಚುಗಳ ವಿರುದ್ಧ ಸೆಡ್ಡು ಹೊಡೆದು ನಿಲ್ಲುವಂತಾದದ್ದು ಮತ್ತು ಚೌಕಾಶಿ ಮಾಡುವ ಬಲವನ್ನು ನಮಗೆ ಕೊಟ್ಟದ್ದು ಸೋವಿಯೆಟ್ ನಿಸ್ವಾರ್ಥ ಸಹಾಯ. ಇದನ್ನು ನಮ್ಮ ಪಕ್ಷದ ಕಾರ್ಯಕ್ರಮ ಬಹಳ ಹಿಂದೆಯೇ ಗುರುತಿಸಿದೆ.

1956 ರಿಂದ 1970ರ ವರೆಗೆ ಸೋವಿಯೆತ್ ಸಹಾಯ ಉಕ್ಕು (ಶೇಕಡಾ 50), ವಿದ್ಯುತ್ ಶಕ್ತಿ (ಶೇಕಡಾ 16) ಮತ್ತು ತೈಲ (ಶೇಕಡಾ 18) ದ ಕ್ಷೇತ್ರಗಳಲ್ಲಿ ಕೇಂದ್ರೀಕೃತವಾಗಿತ್ತು.

ಸೋವಿಯೆತ್ ಸಹಾಯದಿಂದ ಮೆತ್ತಗಾದ ಪಾಶ್ಚಿಮಾತ್ಯ ರಾಷ್ಟ್ರಗಳು ಆಮೇಲೆ ಮೂಲಭೂತ ಕೈಗಾರಿಕೆಗಳ ಕ್ಷೇತ್ರದಲ್ಲಿ ಸಹಾಯಕ್ಕೆ ಮುಂದಾದವು. ಆದರೂ ಇನ್ನೊಂದು ಮುಖ್ಯವಾದ ರೀತಿಯಲ್ಲಿ 70 ರ ದಶಕದಲ್ಲಿ ಭಾರತದ ಆರ್ಥಿಕ ಸ್ವಾವಲಂಬನೆ, ಸಮತೋಲನ ಕಾಯ್ದುಕೊಳ್ಳಲು ಸೋವಿಯೆತ್ ಸಹಾಯ ನೆರವಾಯಿತು. ಈ ಅವಧಿಯಲ್ಲಿ ಅಂದರೆ 1970–73 ರಿಂದ 1979–86 ರ ವರೆಗೆ ತೈಲ ಆಮದು ಶೇಕಡಾ 5-6 ರಿಂದ ಶೇಕಡಾ 76. 8 ರವರೆಗೆ ಏರಿತು. ಇದು ಅಮೂಲ್ಯ ವಿದೇಶಿ ವಿನಿಮಯದ ಅಗತ್ಯವಿಲ್ಲದೆ ರೂಪಾಯಿ ಪಾವತಿಯಲ್ಲೇ ನಮಗೆ ದೊರಕಿತು. ಇದು ಈ ಅವಧಿಯಲ್ಲಿ ಆರ್ಥಿಕವಾಗಿ ಡೋಲಾಯಮಾನ ಸ್ಥಿತಿಯಲ್ಲಿದ್ದ ಭಾರತಕ್ಕೆ ಬಹಳ ಮುಖ್ಯವಾಗಿತ್ತು.

ಇವಲ್ಲದೆ ಇನ್ನೊಂದು ವಿಶಿಷ್ಟ ಸಂಗತಿ ಸೋವಿಯೆತ್ ಸಹಾಯದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. 60 ರ ದಶಕದಲ್ಲಿ ವಾಣಿಜ್ಯದ ಸಮತೋಲನ ಭಾರತಕ್ಕೆ ವಿರುದ್ಧವಾಗಿದ್ದರೆ (ಅಂದರೆ ಭಾರತದ ಆಮದು ರಫ್ತಿಗಿಂತ ಹೆಚ್ಚಾಗಿರುವುದು), ಅದು 70 ರ ದಶಕದಲ್ಲಿ ಭಾರತಕ್ಕೆ ಪರವಾಗಿದೆ.

70 ರ ದಶಕದ ಕೊನೆಯಲ್ಲಿ ಮತ್ತು 80 ರ ದಶಕದಲ್ಲಿ ಶಸ್ತ್ರಾಸ್ತ್ರಗಳ ಸರಬರಾಜು ಭಾರತ–ಸೋವಿಯೆತ್ ವಾಣಿಜ್ಯ ಸಂಬಂಧದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಸಾಮ್ರಾಜ್ಯಶಾಹಿ ಭಾರತವನ್ನು ಹೊರಗಿನಿಂದ ಸುತ್ತುವರಿದು ಮತ್ತು ಒಳಗಿನಿಂದ ವಿಚ್ಛಿದ್ರಕಾರಿ ಶಕ್ತಿಗಳಿಗೆ ಕುಮ್ಮಕ್ಕಿನ ಮೂಲಕ ದುರ್ಬಲಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಇದು ಮುಖ್ಯವಾದದ್ದು ಇದಕ್ಕೆ ಉದಾಹರಣೆ ಸೋವಿಯೆಟ್ ಯೂನಿಯನಿನ ವಿಮಾನ ದಳವನ್ನು ಈಗಷ್ಟೆ ಪ್ರವೇಶಿಸುತ್ತಿರುವ M.I.G.–27 ಮತ್ತು M.I.G.–26 ನ್ನು ಭಾರತಕ್ಕೆ ಕೊಡಲು ಒಪ್ಪಿರುವುದು ಮತ್ತು ಉತ್ಪಾದಿಸಲು ಲೈಸೆನ್ಸ್ ನೀಡಿರುವುದು.

ಹೀಗೆ ಸೋವಿಯತ್ ಸಹಾಯ ಆಯಕಟ್ಟಿನ ಕ್ಷೇತ್ರಗಳಲ್ಲಿ ಆಯಕಟ್ಟಿನ ಸಂದರ್ಭಗಳಲ್ಲಿ ಭಾರತದ ರಾಜಕೀಯ ಸ್ವಾತಂತ್ರ್ಯ ಆರ್ಥಿಕ ಸ್ವಾವಲಂಬನ ಕಾಪಾಡಿಕೊಳ್ಳುವುದರಲ್ಲಿ ಸಹಾಯವಾಗಿದೆ.

ಈ ಮೇಲೆ ಹೇಳಿದ ಕ್ಷೇತ್ರಗಳಲ್ಲದೆ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಈಗ ಮಾಡಿಕೊಂಡಿರುವ ಆರ್ಥಿಕ ಒಪ್ಪಂದದಿಂದಾಗಿ ಸಹಕಾರ ಬೆಳೆಯಲಿದೆ. ಇಷ್ಟರವರೆಗೆ ಅಷ್ಟೇನೂ ಗಣನೀಯ ಪ್ರಮಾಣದಲ್ಲಿಲ್ಲದ ವೈಜ್ಞಾನಿಕ ಸಂಶೋಧನೆಯ ಕ್ಷೇತ್ರದಲ್ಲಿ ಸಹಕಾರ ಹೆಚ್ಚಿಸುವ ಸಾಧ್ಯತೆ ಇದೆ. ಈವರೆಗೆ ಈ ಕ್ಷೇತ್ರದಲ್ಲಿ ಹೆಸರಿಸಬಹುದಾದ ಅಂಶಗಳೆಂದರೆ ಎಮ್. ಹೆಚ್. ಡಿ. ಎಂಬ ಹೊಸ ವಿದ್ಯುತ್ ಉತ್ಪಾದನಾ ವಿಧಾನದಲ್ಲಿ ಮತ್ತು ಅಂತರಿಕ್ಷ ತಂತ್ರಜ್ಞಾನ ಸಂಶೋಧನೆಯಲ್ಲಿ ಮೂಡಿಬಂದಿರುವ ಸಹಕಾರ.

"ಆರು ದೇಶಗಳ-ಐದು ಖಂಡಗಳ ನಿಶ್ಶಸ್ತ್ರೀಕರಣದ ಎಲ್ಲಾ ಪ್ರಸ್ತಾಪಗಳನ್ನು ಅವರು (ಗೋರ್ಬಚೆವ್) ತಕ್ಷಣ ಒಪ್ಪಿಕೊಂಡುದನ್ನು ಕಂಡವರಿಗೆ ಅಪಾರ ಹರ್ಷವಾಯಿತು. ರೆಕ್ಯಾವಿಕ್‌ನಲ್ಲಿ ಅವರ ಪ್ರಸ್ತಾಪಗಳಂತೂ ನಮ್ಮ ಪ್ರಯತ್ನಗಳಿಗಿಂತ ಎಷ್ಟೋ ಮುಂದೆ ಹೋಗಿವೆ. ಅವುಗಳ ಹರಹು ಹಾಗೂ ದಿಟ್ಟತನ ಗಮನಾರ್ಹ".

— ಪ್ರಧಾನಮಂತ್ರಿ ರಾಜೀವ್ ಗಾಂಧಿ.

ಸೋವಿಯೆತ್ ಮಿತ್ರರ ಭೇಟಿಗಳ ಸರಮಾಲೆ

ಸೋವಿಯೆತ್ ಮುಖಂಡರ ಕೆಲವು ಮುಖ್ಯ ಭಾರತ ಯಾತ್ರೆಗಳ ಪಟ್ಟಿ ಇಲ್ಲಿದೆ.

ನವಂಬರ್ 1955	:	ಸಿ.ಪಿ.ಎಸ್.ಯು. ಪ್ರಧಾನ ಕಾರ್ಯದರ್ಶಿ ನಿಕಿತಾ ಕ್ರುಶ್ಚೆವ್ ಹಾಗೂ ಪ್ರಧಾನಮಂತ್ರಿ ಬುಲ್ಗಾನಿನ್.
ಜನವರಿ 1960	:	ಒಕ್ಕೂಟದ ಅಧ್ಯಕ್ಷ ವೊರೋಶಿಲೋವ್.
ಡಿಸೆಂಬರ್ 1961	:	ಒಕ್ಕೂಟದ ಅಧ್ಯಕ್ಷ ಬ್ರೆಜ್ನೆವ್.
ಜನವರಿ 1966	:	ಪ್ರಧಾನಮಂತ್ರಿ ಕೊಸಿಗಿನ್.
ಜನವರಿ 1968	:	ಪ್ರಧಾನಮಂತ್ರಿ ಕೊಸಿಗಿನ್.
ಮೇ 1969	:	ಪ್ರಧಾನಮಂತ್ರಿ ಕೊಸಿಗಿನ್.
ನವಂಬರ್ 1973	:	ಸಿ.ಪಿ ಎಸ್.ಯು. ಪ್ರಧಾನ ಕಾರ್ಯದರ್ಶಿ ಬ್ರೆಜ್ನೆವ್.
ಮಾರ್ಚ್ 1979	:	ಪ್ರಧಾನಮಂತ್ರಿ ಕೊಸಿಗಿನ್.
ಡಿಸೆಂಬರ್ 1980	:	ಅಧ್ಯಕ್ಷ ಬ್ರೆಜ್ನೆವ್.
ನವಂಬರ್ 1984	:	ಪ್ರಧಾನಮಂತ್ರಿ ಟಿಕೊನೊವ್.

ಲಂಕೇಶ ಪತ್ರಿಕೆಗೆ ಉತ್ತರ...

2 ನೇ ಪುಟದಿಂದ)

(ಎಂ) ಪಕ್ಷ ಭೂಸುಧಾರಣೆಗೆ ವಿರೋಧ ವಾಗಿದೆ ಎಂಬ ನಿಮ್ಮ ವಾದ ಎಷ್ಟು ಪೊಳ್ಳು ಎನ್ನುವುದಕ್ಕೆ ಇನ್ನು ಏನು ಆಧಾರ ಬೇಕು ?

ಇನ್ನು ಕಾಂ. ಗೋವಿಂದ ಪಿಳ್ಳೈ ಒಪ್ಪಿಕೊಂಡಿದ್ದಾರೆಂದು ಬರೆದಿದ್ದೀರಿ ಅದು, ಖಂಡಿತ ನಿಜ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಜಾರಿಗೆ ತಂದಿಲ್ಲಾ. ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಯಾವಾಗ ಜಾರಿಗೆ ತರಬೇಕೆಂಬುದು ನಿಮಗೆ ಗೊತ್ತಿಲ್ಲದೆ ಬಾಯಿಗೆ ಬಂದಂತೆ ಬರೆಯುವುದು ಬೇಜವಬ್ದಾರಿತನವಾಗುತ್ತದೆ. ಸ್ವಾತಂತ್ರ್ಯ ಬಂದು 40 ವರ್ಷಗಳಾಗಿದ್ದರೂ ಸಾಮಾನ್ಯ ಜನತೆಯ ಕನಿಷ್ಟ ಪ್ರಜಾಪ್ರಭುತ್ವ ಬೇಡಿಕೆಗಳೂ ಸಹ ಈಡೇರದಿರುವಾಗ, ಭೂಹೀನರಿಗೆ ಭೂಮಿ ಕೊಡುವುದು ರೈತ–ಕಾರ್ಮಿಕ ಮತ್ತು ಕೃಷಿ ಕಾರ್ಮಿಕರ ಹೋರಾಟವನ್ನು ಹತ್ತಿಕ್ಕಲು ಪೋಲೀಸರನ್ನು ಬಳಸುವಂತಹ ಇನ್ನು ಅನೇಕ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ಮಾಡದೆ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಜಾರಿಗೆ ತರುವುದೆಂದರೆ ಮಕ್ಕಳಾಟ ಆಗುತ್ತದೆ. ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಜಾರಿಗೆ ತರುವುದು ಕ್ರಾಂತಿಯನಂತರ ಸಮಾಜವಾದಿ ವ್ಯವಸ್ಥೆ ತರುವಾಗ ಎಂಬುದನ್ನು ಓದಿದರಷ್ಟೇ ತಿಳಿಯುತ್ತದೆ.

ಮೂರನೆಯ ದರ್ಜೆ ರಾಜಕಾರಣಿಗಳ ಭಾಷಣದ ತರಹ ರಾಜಕೀಯ ವಿಮರ್ಶೆಯ ಲೇಖನಗಳನ್ನು ಬರೆದು ವಸ್ತುನಿಷ್ಟ ಪ್ರಜ್ಞಾವಂತ ಓದುಗರನ್ನು ಅವಹೇಳನ ಮಾಡಬೇಡಿ.

ಕಮ್ಯುನಿಸ್ಟ್ ಸಿದ್ಧಾಂತವನ್ನು ವಿಮರ್ಶಿಸಬೇಕಾದರೆ ಅದರ ಬಗ್ಗೆ ಆಳವಾಗಿ ಅಭ್ಯಾಸ ಮಾಡದೆ ಅದರ ಮೇಲೆ ಯಾರೋ ಪೂರ್ವಗ್ರಹ ಪೀಡಿತರು ಬಂಡವಾಳಶಾಹಿಗಳ ಏಜೆಂಟರು ಬರೆದಿರುವ ವಿಮರ್ಶೆಗಳನ್ನು ಓದಿ ಕಮ್ಯುನಿಸ್ಟರ ಬಗ್ಗೆ ವಿಮರ್ಶೆ ಮಾಡುವ ಉದ್ಧಟತನ ಮಾಡುವುದು 5 ಜನ ಕುರುಡರು ಆನೆಯನ್ನು ವಿವರಿಸಿದ ಕಥೆಯಂತೆ ಆಗುತ್ತದೆ. ●

ರೈತಸಂಘದ ಚಟುವಟಿಕೆಗಳು

ರೈತ ಸಂಘದಿಂದ ವಿಶ್ವಶಾಂತಿ ದಿನಾಚರಣೆ

ಅಖಿಲ ಭಾರತ ಕಿಸಾನ ಸಭಾದ ಆದೇಶದ ಮೇರೆಗೆ ಕರ್ನಾಟಕ ರಾಜ್ಯಾದ್ಯಂತ ವಿಶ್ವಶಾಂತಿ ದಿನಾಚರಣೆ ಆಚರಿಸಲಾಯಿತು. ಯುದ್ಧದ ಭೀತಿಯನ್ನು ತಡೆಗಟ್ಟಲು ಸೋವಿಯತ್ ಯೂನಿಯನಿನ ಕಮ್ಯುನಿಸ್ಟ್ ಪಕ್ಷದ ಪ್ರ. ಕಾರ್ಯದರ್ಶಿ ಗೊರ್ಬಚೆವ್ ಅವರು ಸತತ ನಡೆಸಿರುವ ಪ್ರಯತ್ನ ಅಣ್ವಸ್ತ್ರ ನಿಷೇಧಕ್ಕಾಗಿ ಅವರು ಮಂಡಿಸುತ್ತಿರುವ ಹಲವಾರು ಸೂಚನೆಗಳು ಅಮೇರಿಕದ ಅಧ್ಯಕ್ಷ ರೇಗನ್ ಅವುಗಳನ್ನೆಲ್ಲ ತಳ್ಳಿಹಾಕಿ, ಮೂರನೇ ಮಹಾಯುದ್ಧಕ್ಕಾಗಿ, ನಕ್ಷತ್ರ ಯುದ್ಧಕ್ಕಾಗಿ ನಡೆಸಿರುವ ಪ್ರಯತ್ನ, ಇಂಥ ಪರಿಸ್ಥಿತಿಯಲ್ಲಿ ಕಾರ್ಮಿಕರ, ರೈತರ ಕರ್ತವ್ಯಗಳನ್ನು ವಿವರಿಸಿ ಜಾಗೃತಿಯನ್ನುಂಟು ಮಾಡುವ ಚಳುವಳಿ ನವಂಬರ 1 ರಿಂದ 7 ರವರೆಗೆ ನಡೆಯಿತು. ಅದರ ಕುರಿತು ಕೆಲವು ವರದಿಗಳು.

ಬಿಜಾಪುರ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಸಾವಿರಾರು ರೈತರು ಮಹಿಳೆಯರನ್ನೊಳಗೊಂಡು ಕೊಂಬು ಕಹಳೆಗಳೊಂದಿಗೆ. ರೈತರ ಬೇಡಿಕೆಗಳ ಕುರಿತು ಘೋಷಣೆ ಕೂಗುತ್ತ ಬೃಹತ್ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮತ ಪ್ರದರ್ಶನ ನಡೆಸಿ ಮನವಿ ಅರ್ಪಿಸಿದರು. ತಿಗಣಿಬಿದರಿ ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿಯಲ್ಲಿ ಲಂಚ ತಿಂದು ಪಕ್ಷಪಾತ ನಡೆಸುತ್ತಿದ್ದ ತಹಶೀಲದಾರರನ್ನು ಖಂಡಿಸಲಾಯಿತು.

ಮನಗೋಳಿ ಪಿ. ಎಸ್. ಐ. ನಿರಪರಾಧಿ ರೈತರ ಮೇಲೆ ಸುಳ್ಳು ಕಟ್ಲೆ ಹಾಕಿ, ಹೊಡೆಯುತ್ತಿರುವುದರ ಕುರಿತು ಎಸ್. ಪಿ. ಯವರಿಗೆ ಫಿರ್ಯಾದಿ ಕೊಡಲಾಯಿತು. ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಉಪಾಧ್ಯಕ್ಷ ಎ. ಎಚ್. ಹೊನ್ನುಟಗಿ, ವಿಠ್ಠಲ್ ಸೊನ್ನದ, ಬಸವಂತಪ್ಪ ಕಳ್ಳೊಳ್ಳಿ, ಮಳಸಿದ್ಧ ನಾಯಕೊಡಿ, ದ್ಯಾಮನಗೌಡ ಬಿರಾದಾರ, ಮೊದಲಾದವರು ಮತ ಪ್ರದರ್ಶನದ ಮುಖಂಡತ್ವ ವಹಿಸಿದ್ದರು.

ಭೀಮಸಿ ಕಲಾದಗಿಯವರು ಮತ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡುತ್ತ ಜನತಾ ಸರಕಾರ ರೈತರಿಗಿತ್ತ ಆಶ್ವಾಸನೆಗಳನ್ನು ಪೂರೈಸದೆ ರೈತರಿಗೆ ಮೋಸ ಮಾಡುತ್ತಿದೆ. ಆದ್ದರಿಂದ ರೈತರೆಲ್ಲ ಸಂಘಟಿತರಾಗಿ ಹೋರಾಡಬೇಕೆಂದು ಕರೆ ನೀಡಿದರು.

ಜೇವರ್ಗಿ :

ಕರ್ನಾಟಕ ಪ್ರಾಂತ ರೈತ ಸಂಘದ ಜೇವರ್ಗಿ ತಾಲೂಕು ಸಮಿತಿಯು ರಾಜ್ಯ ಸಮಿತಿಯ ಕರೆಯ ಮೇರೆಗೆ ನವೆಂಬರ್ 1 ರಿಂದ 6 ರವರೆಗೆ ವಿಶ್ವ ಶಾಂತಿ–ಯುದ್ಧ ವಿರೋಧೀ ಸಪ್ತಾಹವನ್ನು ಆಚರಿಸಿತು. ತಾಲೂಕು ಸಮಿತಿಯ 'ಜಾಥಾವನ್ನು ಸಂಘಟಿಸಿ ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡಿ ಸಭೆಗಳನ್ನು ನಡೆಸಿದೆ, ನವೆಂಬರ್ 7 ರಂದು ಜೇವರ್ಗಿಯಲ್ಲಿ ಶಾಂತಿ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಅಲ್ಲದೆ ರೈತರ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಧರಣಿಯನ್ನು ಸಹ ನಡೆಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು. ಬಹಿರಂಗ ಸಭೆಯಲ್ಲಿ ಗುಲ್ಬರ್ಗಾ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ. ಕಲ್ಲಪ್ಪಾ ಕಿರಣಗಿ, ಕಾ. ಮಹವೀರ ಜಲಾಲ ಕಾ. ನಿಂಗಣ್ಣ ಮೋರಟಿಗಿ, ಕಾ. ಸಿದ್ದಣ್ಣ ಪರಮಾಳ, ಕಾ. ಪರಮಾನಂದ ಮುಂತಾದವರು ಮಾತನಾಡಿದರೆಂದು ವರದಿಯಾಗಿದೆ.

ರೈತರಿಗೆ ತರಬೇತಿ

ರೈತ ಸಂಗದ ಕಾರ್ಯಕರ್ತರಿಗೆ ಸಂಘಟನಾತ್ಮಕ ತರಬೇತಿ ನೀಡಲು ಘೋದನದಲ್ಲಿ 25-11-86 ರಂದು ತಾಲೂಕ ಮಟ್ಟದ ಅಧ್ಯಯನ ಶಿಬಿರ ಸಂಘಟಿಸಲಾಗಿತ್ತು.

ರೈತ ಸಂಘಟನೆಯ ಚರಿತ್ರೆ, ಉತ್ಪಾದನೆ, ಸಮಾಜದ ಬೆಳವಣಿಗೆಯಲ್ಲಿ ರೈತನ ಪಾತ್ರ, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿಪಡಿಸುವ ಕುರಿತು ಬರ ಮತ್ತು ನೆರೆಹಾವಳಿ, ಪ್ರಕೃತಿ ವಿಕೋಪ ಎದುರಿಸುವ ಬಗ್ಗೆ ಗ್ರಾಮೀಣ ಉತ್ಪಾದನಾ ಸಂಬಂಧಗಳು ಮತ್ತು ಸಮಸ್ಯೆಗಳನ್ನು ಅಭ್ಯಸಿಸಿ, ಬೇಡಿಕೆ ರೂಪಿಸಿ ಹೋರಾಟ ನಡೆಸುವ ಬಗ್ಗೆ, ಪಂಚಾಯಿತಿಯಿಂದ ಪಾರ್ಲಿಮೆಂಟವರೆಗೆ ರೈತ – ಕೃಷಿ ಕಾರ್ಮಿಕರು ಭಾಗವಹಿಸುವ ಕುರಿತು ಕಾ। ಆರ್. ಕೆ. ಹುಡಿಗಿ ಕಾ। ಮಾನು ಪಾಠ ಹೇಳಿದರು.

ಶಿಬಿರದಲ್ಲಿ 14 ಹಳ್ಳಿಗಳಿಂದ 124 ಕಾರ್ಯಕರ್ತರು ಭಾಗವಹಿಸಿದರು. ಇದರಲ್ಲಿ 8 ಹಳ್ಳಿಗಳಿಂದ ಹೊಸದಾಗಿ ಶಿಬಿರಕ್ಕೆ ಬಂದಿದ್ದರು.

ಘೋಧನ ಗ್ರಾಮದ ರೈತ ಸಂಘವು ಶಿಬಿರದ ವ್ಯವಸ್ಥೆ ಮಾಡಿತು. ಅಧ್ಯಕ್ಷತೆ ಬಸವರಾಜ ಮರಡಿ ವಹಿಸಿದರು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕಾ। ಮಾನು ಬಸವರಾಜ ಜವಳಿ, ಮತ್ತು ಸುಬಾಷ ವಾರದ ಮಾತನಾಡಿ ಮುಂಬರುವ ಚುನಾವಣೆಯಲ್ಲಿ ರೈತರ ಶೋಷಕರನ್ನು ಸೋಲಿಸಬೇಕೆಂದು ಕರೆನೀಡಿದರು.

ಬೆಳ್ತಂಗಡಿ :

ದ. ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಗ್ರಾಮದ ನಿವಾಸಿ ಶಶಿಧರ ಎಂಬುವರನ್ನು ಪೋಲೀಸರು ಥಳಿಸಿದ್ದಾರೆ ಶಶಿದರ ಅವರು ಧರ್ಮಸ್ಥಳದ ಸಹಕಾರೀ ಬ್ಯಾಂಕಿನಿಂದ ಸಾಲ ಪಡೆದು ಅಡಿಕೆ ತೋಟ ಬೆಳಸಿದ್ದಾರೆ. ಇದು ತನಗೆ ಸೇರಿದ ತೋಟವೆಂದು ನಾರಾಯಣ ಎಂಬುವರು ದೂರು ನೀಡಿದ್ದೇ ಘಟನೆಗೆ ಕಾರಣ. ಈ ಬಗ್ಗೆ ಭೂನ್ಯಾಯ ಮಂಡಳಿಯಲ್ಲಿ ಹಿಂದೆಯೇ ಶಶಿಧರನ ಪರವಾಗಿ ತೀರ್ಮಾನವಾಗಿದ್ದರೂ, ನಾರಾಯಣ ಎಂಬುವರು ತಮ್ಮ ಪ್ರಭಾವೀವಲಯಗಳ ಮೂಲಕ ತೋಟವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಪೋಲೀಸರೂ ಇದರಲ್ಲಿ ಶಾಮೀಲಾಗಿದ್ದಾರೆ. ಸಿ.ಪಿ.ಐ. (ಎಂ) ನ ತಾಲೂಕು ಕಾರ್ಯದರ್ಶಿ ಕಾ. ಬಿ. ವಿಷ್ಣುಮೂರ್ತಿ ಅವರು ಪೋಲಿಸರ ದೌರ್ಜನ್ಯವನ್ನು ಖಂಡಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ತಾಲೂಕಿನ ರೈತರು ಪ್ರತಿಭಟನೆ ನಡೆಸುವರೆಂದು ತಿಳಿಸಿದ್ದಾರೆ.

ಹಾನಗಲ್

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕರೆಯಂತೆ ಹಾನಗಲ್ ತಾಲೂಕ್ ರೈತ ಕೂಲಿಕಾರ ಸಂಘವು ತಾ 7-11-86 ರಂದು ಅರಣ್ಯ, ರೆವಿನ್ಯು, ಕೆರೆ. ಕಟ್ಟೆ ಬಂದರು ಭೂಮಿಯ ಅತಿಕ್ರಮಣ ಮಾಡಿದ ಭೂಮಿಹೀನರಿಗೆ ಪಟ್ಟಾ ಕೊಡಬೇಕು. ಮುಂತಾದ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು, ಮುಖ್ಯ ಮಂತ್ರಿಗಳಿಗೆ ಅರ್ಪಿಸಿದ ಮನವಿಯಲ್ಲಿಯ ಬೇಡಿಕೆ ಜಾರಿಗೆ ಒತ್ತಾಯಿಸಿ ಹಾನಗಲ್ ತಾಲೂಕ ಕಛೇರಿ ಎದುರ. ಧರಣಿ ಸತ್ಯಾಗ್ರಹ ಮಾಡಿತು.

ಧರಣಿ ಸತ್ಯಾಗ್ರಹದಲ್ಲಿ ತಾಲೂಕಿನ ಗುಡ್ಡದ ಹಳ್ಳಿಗಳಾದ ಕಲಕೇರಿ, ಉಪ್ಪಣಸಿ, ಹಿರೇಬಾಸೂರ, ಸೋಮಸಾಗರ, ಹಿರೇಕಾಂಸಿ, ಮುಂತಾದ ಹಳ್ಳಿಗಳಿಂದ ನೂರಾರು ರೈತಕೂಲಿಕಾರರು ನೂರಾರು ಮಹಿಳೆಯರೂ ಭಾಗವಹಿಸಿದ್ದರು. ಅಕ್ಕೀ ಆಲೂರಿನ ನಾಡಕಛೇರಿಯೆದುರು ನಡೆದ ಈ ಧರಣಿಯು ಮುಂಜಾನೆ 10 ಘ. ದಿಂದ ಸಂಜೆ. 4. ಘ ವರೆಗೆ ನಡೆಯಿತು. ಕಛೇರಿ ಎದುರು ಸಾಲಾಗಿ ನಿಲ್ಲಿಸಿದ ಬ್ಯಾನರುಗಳು, ಮತ್ತು ಕೆಂಪು ನಿಶಾನೆಗಳು ; ಹಾಗೂ. ಆಗಾಗ ನಡೆದ ಘೋಷಣೆಗಳು ಜನರನ್ನು ಆಕರ್ಷಿಸುತ್ತಿದ್ದವು.

ಸತ್ಯಾಗ್ರಹಿಗಳನ್ನು ದ್ದೇಶಿಸಿ, ಮಲ್ಲಣ್ಣ ಗಡಿಯಣ್ಣವರ ನಾಗಪ್ಪ ಪೌರದ ಮಾತಾಡಿದ ನಂತರ ತಾಲೂಕ ರೈತ ಸಂಘದ ಅಧ್ಯಕ್ಷ ಕಾ. ಫಕ್ಕೀರಪ್ಪ ಹೋತನ ಹಳ್ಳಿ ಮತ್ತು ಹಾವೇರಿಯ ವ್ಹಿ. ಪಂಚಾಕ್ಷರಿ, ಮಾತನಾಡಿದರು.

ಸಂಜೆ ನಾಲ್ಕು ಘಂಟೆಗೆ ಕಾ. ಫಕ್ಕೀರಪ್ಪ. ಕಾ. ಪಂಚಾಕ್ಷರಿ, ಕಾ. ಮಂಜುನಾಥ. ಕಾ. ದುಂಬಾಲಿ, ಕಾ. ಚಂದ್ರಶೇಖರಯ್ಯಾ ಉಪತಹಶೀಲ್ದಾರರಿಗೆ ಮನವಿ ಒಪ್ಪಿಸಿದರು. ಉಪ ತಹಶೀಲ್ದಾರರು ಮನವಿಯನ್ನು ಸ್ವೀಕರಿಸಿ ಮನವಿಯನ್ನು ತಕ್ಷಣ ತಹಶೀಲ್ದಾರರಿಗೆ ಕಳಿಸಿ ಮಾರ್ಗಗಳನ್ನು ಪೂರೈಸಲು ವಿನಂತಿಸುವದಾಗಿ ಸತ್ಯಾಗ್ರಹಿಗಳಿಗೆ ತಿಳಿಸಿದ ನಂತರ ಘೋಷಣೆಗಳೊಂದಿಗೆ ಸತ್ಯಾಗ್ರಹ ಮುಕ್ತಾಯವಾಯಿತು.

ತುಮಕೂರು ಜಿಲ್ಲೆ :

ಊರು ಕೆರೆಯಲ್ಲಿ ರೈತ ಸಂಘದ ಅಧ್ಯಕ್ಷ ಗೋವಿಂದರಾಜು ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆದು ಯು. ರಾಜು, ಆರ್. ಶ್ರೀನಿವಾಸ, ಮೊದಲಾದವರು ಭಾಷಣ ಮಾಡಿ ಶಾಂತಿಗಾಗಿ ಹೋರಾಡಬೇಕೆಂದು ಕರೆನೀಡಿದರು. ಹಾಗಲವಾಡಿಯಲ್ಲಿ ಎಚ್. ಆರ್. ಸುಬ್ರಹ್ಮಣ್ಯ ವಹಿಸಿದ್ದರು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಎಚ್. ಸಿ ಚೆನ್ನಪ್ಪ, ಪುಟ್ಟಸ್ವಾಮಯ್ಯ ಅವರು ತಮ್ಮ ಭಾಷಣದಲ್ಲಿ ರೇಗನ್ ಅವರ ಯುದ್ಧ ತಯಾರಿಯನ್ನು ಸೋವಿಯತ್ ಸರಕಾರ ನಡೆಸಿರುವ ಯುದ್ಧ ವಿರೋಧಿ ಚಳುವಳಿಯನ್ನು ವಿವರಿಸಿದರು.

3 ವರ್ಷದಲ್ಲಿ ಎಸ್. ಎಫ್. ಐ. ನ ಪ್ರಮುಖ ಹೋರಾಟಗಳು

(ವಿಜಯವಾಡದಲ್ಲಿ ಎಸ್.ಎಫ್.ಐ. ಅಖಿಲಭಾರತ 6ನೇ ರಾಷ್ಟ್ರ ಸಮ್ಮೇಳನವು ಡಿಸೆಂಬರ್ 11 ರಿಂದ 15ರವರೆಗೆ ನಡೆಯಲಿರುವ ವಿದ್ಯಾರ್ಥಿ ಸಮುದಾಯದ ಮಹತ್ವಪೂರ್ಣ ಸಮ್ಮೇಳನವಾಗಿ ವಿಜಯೋತ್ಸವನ್ನು ಆಚರಿಸಲಿದೆ. ವಿದ್ಯಾರ್ಥಿ ಸಮುದಾಯದ ಸುವರ್ಣ ಮಹೋತ್ಸವ ಆಚರಣೆಯ ಹಿನ್ನಲೆಯಿಂದ ಹದಿನೈದು ಲಕ್ಷಕ್ಕೂ ಮೀರಿದ ಸದಸ್ಯತ್ವ ಹೊಂದಲಿರುವ ಈ ಸಮ್ಮೇಳನದ ಪೂರ್ವಭಾವಿಯಾಗಿ ಕರ್ನಾಟಕ ವಿದ್ಯಾರ್ಥಿ ಸಮುದಾಯಕ್ಕೆ, ಕರ್ನಾಟಕದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ಕಳೆದ ರಾಜ್ಯ ಸಮ್ಮೇಳದಿಂದಿಡೆಗೆ ನಡೆಸಿದ ಚಟುವಟಿಕೆ, ಹೋರಾಟಗಳನ್ನು ಕುರಿತು ಸಂಕ್ಷಿಪ್ತ ವರದಿ ನೀಡಲಾಗಿದೆ.)

1984 ರಲ್ಲಿ ಪ. ಬಂಗಾಳದ ಡಂಡಂನಲ್ಲಿ ಜನವರಿ 22 ರಿಂದ 26ರ ವರೆಗೆ ನಡೆದ ಎಸ್. ಎಫ್. ಐ. ಸ್ಫೂರ್ತಿದಾಯಕವಾದ 5ನೇ ರಾಷ್ಟ್ರ ಸಮ್ಮೇಳನದಲ್ಲಿ ಕರ್ನಾಟಕದಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

ರಾಷ್ಟ್ರದ ಕರೆ–ಅಲೆ ಅಲೆಯಾಗಿ: ಕಳೆದ ರಾಜ್ಯ ಸಮ್ಮೇಳನದ ನಂತರ 1984 ಮತ್ತು 85 ರಲ್ಲಿ ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗದ ಅಂಗವಾಗಿ ಡಿ.ವೈ.ಎಫ್.ಐ. ನೊಂದಿಗೆ ಜಂಟಿಯಾಗಿ 'ವಾರಾಚರಣೆ' ಅಂಗವಾಗಿ ವಿಚಾರ ಸಂಕೀರಣ ಬೀದಿ ಬೀದಿಯ ಸಭೆಗಳು, ಸೈಕಲ್ ಜಾಥಾ, ಮೆರವಣಿಗೆಗಳನ್ನು ರಾಜ್ಯದ 10 ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹ, ಗೋಡೆಬರಹ, ಬಿತ್ತಿ ಪತ್ರಗಳ ಮೂಲಕ ಪ್ರಚಾರ ನಡೆಸಿದ ಪರಿಣಾಮವಾಗಿ ಸಾವಿರ ಸಾವಿರಗಟ್ಟಲೆ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ತರಗತಿಗಳನ್ನು ಬಹಿಷ್ಕರಿಸಿದರು. ಈ ಅಲೆಯನ್ನು ವಿದ್ಯಾರ್ಥಿ ಸಮುದಾಯದ ಕಡೆ ಒಯ್ದು ಮುಟ್ಟಿಸುವಲ್ಲಿ ಯಶಸ್ವಿಯಾಯಿತು.

ಗುಡುಗಾಗಿ ಗುಡುಗಿದ ನೂತನ ಶಿಕ್ಷಣ ನೀತಿ ವಿರೋಧಿ ಚಳುವಳಿ :- 1985 ರಲ್ಲಿ ಕರ್ನಾಟಕದ ಐದು ವಿಶ್ವ ವಿದ್ಯಾಲಯಗಳ ಕೇಂದ್ರಗಳಲ್ಲಿ ಹಾಗೂ ಸ್ಥಳೀಯವಾಗಿ ವಿಚಾರ ಸಂಕೀರ್ಣ ಏರ್ಪಡಿಸಲಾಗಿತ್ತು. ರಾಜ್ಯ ಸಮಿತಿ ಕರೆಯ ಮೇರೆಗೆ ಜುಲೈ 25 ರಂದು 'ಶಿಕ್ಷಣ ರಕ್ಷಿಸಿ, ಭಾರತ ಉಳಿಸಿ' ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ವಿದ್ಯಾರ್ಥಿ ಸಮುದಾಯವನ್ನು ಸಂಘಟಿಸಿದಲ್ಲಿ, ಅವರಿಂದ ಪ್ರಬಲವಾದ ವಿರೋಧ ಬರದಂತೆ ಮಾಡುವಲ್ಲಿ ಜಿ.ಕೆ. ಎಸ್.ಎಫ್.ಐ.ಘಟಕವು ಜೀಪ್ ಜಾಥಾ ಮಾಡಿದೆ, ಬಳ್ಳಾರಿಯಲ್ಲಿ ಸಾವಿರಾರು ಗಟ್ಟಲೇ ತರಗತಿಗಳನ್ನು ಬಹಿಷ್ಕರಿಸಿದರು. ರಾಷ್ಟ್ರಪತಿಯವರಿಗೆ ಸಲ್ಲಿಸಲಾದ ಮನವಿಗೆ ರಾಜ್ಯದಿಂದ 12 ಸಾವಿರ ಸಹಿ-ಸಂಗ್ರಹ ಕಳುಹಿಸಲಾಯಿತು.

1985ರ ಆಗಸ್ಟ 15ನ್ನು ಸಾಮ್ರಾಜ್ಯಶಾಹಿ ವಿರೋಧಿ ದಿನವನ್ನಾಗಿ ಆಚರಿಸಲಾಯಿತು.

ಚರಿತ್ರಾರ್ಹದ ವಿಧಾನ ಸೌಧ ಚಲೋ :– 1986 ಜನವರಿ 30 ರಂದು 60 ಸಾವಿರ ಸಹಿ ಸಂಗ್ರಹಿಸಿ 25 ಬೇಡಿಕೆಗಳಿಗಾಗಿ ಒತ್ತಾಯಿಸಿ, ನಡೆದ ಬೆಂಗಳೂರಿನ ಬೃಹತ್ ಮೆರವಣಿಗೆ ನಿರೀಕ್ಷೆಗೆ ಮೀರಿ ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ವಿಧಾನಸೌಧ ಚಲೋದಲ್ಲಿ ಭಾಗವಹಿಸಿದ್ದರು. ಕೊಟೇಷನ್–ಕ್ಯಾಪಿಟೇಷನ್ ಪದ್ಧತಿಯನ್ನೂ ರದ್ದುಗೊಳಿಸಬೇಕೆಂದು ಮುಖ್ಯವಾಗಿ ಒತ್ತಾಯಿಸಲಾಗಿದ್ದು, ಇದಕ್ಕೆ ವಿದ್ಯಾರ್ಥಿ ಸಮುದಾಯದಿಂದ ಒಳ್ಳೆ ಪ್ರತಿಕ್ರಿಯೆ ಕಂಡುಬಂದು ಬೆಂಗಳೂರಿನಲ್ಲಿ ಪ್ರಚಾರ ಸಿದ್ಧತೆ ಹೆಚ್ಚಿಗೆ ನಡೆಸಲಾಗಲಿಲ್ಲ.

ರಾಜ್ಯದ ಪ್ರಮುಖ ಕರೆಗಳು :– ಹಾಸ್ಟೆಲ್ ವಿದ್ಯಾರ್ಥಿಗಳ ಸಮಾವೇಶವು ಬಳ್ಳಾರಿಯಲ್ಲಿ ಜರುಗಿದ ಹಿನ್ನಲೆಯಲ್ಲಿ ಫೆ 8-1985ರಂದು ಹಾಸ್ಟೆಲ್ ವಿದ್ಯಾರ್ಥಿಗಳ ಬೇಡಿಕೆಯ ದಿನಾಚರಣೆ ಅಂಗವಾಗಿ ಹಲವಾರು ಕಾರ್ಯಕ್ರಮ ಮಾಡಿ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಸಂಘಟಿಸುವಲ್ಲಿ ಸಹಕಾರಿಯಾಯಿತು.

ಸೆ. 5-1985 ಪ್ರಜಾಪ್ರಭುತ್ವ ಹಕ್ಕು ಸಂರಕ್ಷಣಾ ದಿನಾಚರಣೆ ಅಂಗವಾಗಿ ಯು.ಜಿ.ಸಿ. ಶಿಫಾರಸ್ಸುಗಳ ವಿರುದ್ಧ ವಿ.ವಿ ಸೆನಿಟ್ ಮತ್ತು ಸಿಂಡಿಕೇಟಗಳಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯ ಯು.ಜಿ.ಸಿ. ಶಿಫಾರಸ್ಸುಗಳ ವಿರುದ್ಧ ಬುದ್ಧಿಜೀವಿಗಳ ಸಹಿ–ಸಂಗ್ರಹ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ಕಂಡು ಬರಲಿಲ್ಲ. ವಿದ್ಯಾರ್ಥಿ–ಅಧ್ಯಾಪಕ ಸಂಘಟನೆಗೆ ಐಕ್ಯ ಪ್ರತಿಭಟನೆಗೆ ರಾಜ್ಯ ಸಮಿತಿ ನಡೆಸಿದ ಹೋರಾಟಕ್ಕೆ ಸರಿಯಾದ ಪ್ರತಿಕ್ರಿಯೆ ದೊರೆಯಲಿಲ್ಲ.

15ನೇ ವಾರ್ಷಿಕೋತ್ಸವ ಪ್ರತಿವರ್ಷ 30ರಲ್ಲಿ ಆಚರಿಸಲಾಗುತ್ತದೆ. ಧ್ವಜಾರೋಹಣ, ಸಾಹಿತ್ಯ,-ಕ್ರೀಡಾಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನವಂಬರ್ 6 ರಂದು ಹರಿಯಾಣ ರಾಜ್ಯ ಘಟಕದ ಅಧ್ಯಕ್ಷ ಕಾ॥ ಜಸ್ಬೀರ್ ಸಿಂಗರನ್ನು ಭಾತ್ರಾ ಸಭಾ ಬೆಂಬಲಿಗರು ಭೀಕರವಾಗಿ ಕೊಲೆಗೈದುದ್ದನ್ನು ವಿರೋಧಿ ರಾಜ್ಯಮಟ್ಟದ ಕರೆಯ ಮೇರೆಗೆ ಅನೇಕ ಶಾಖೆಗಳು ನಿರ್ಲಕ್ಷ್ಯ ಮಾಡಿರುವುದು ಗಂಭೀರದೋಷವಾಗಿದೆ.

ಐಕ್ಯ ಕಾರ್ಯಾಚರಣೆ:– 1984 ಮಾರ್ಚ್‌ನಲ್ಲಿ ಜರುಗಿದ ಅಖಿಲಭಾರತ ಶಾಂತಿ ಸಮಾವೇಶ ಕರೆಯಮೇರೆಗೆ ಏಪ್ರಿಲ್ 13ರಂದು ಸಮಾನ ಧೋರಣೆ ಸಂಘಟನೆಯೊಂದಿಗೆ, ಕೆಲವಡೆ ಸ್ವತಂತ್ರವಾಗಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

12ನೇ ವಿಶ್ವ ವಿದ್ಯಾರ್ಥಿಯ ಸಮ್ಮೇಳನದ ಅಂಗವಾಗಿ ಬೆಂಗಳೂರಿನಲ್ಲಿಜುಲೈನಲ್ಲಿ ನಡೆದ ಯುವಮೇಳದಲ್ಲಿ SFI ಪ್ರತಿನಿಧಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನಂತರ ಮಾಸ್ಕೊದಲ್ಲಿ ನಡೆದ ಅತ್ಯಂತ ಸ್ಫೂರ್ತಿದಾಯಕ ಐತಿಹಾಸಿಕ ಮೇಳದಲ್ಲೂ S.F. ಆರಾಧ್ಯ ಭಾಗವಹಿಸಿದ್ದರು ಇದು ನಮ್ಮ ಸಂಘಟನೆಗೆ ಹೆಮ್ಮೆಯ ವಿಷಯವಾಗಿದೆ.

1985 ಏಪ್ರಿಲ್‌ನಲ್ಲಿ ರೈಲ್ವೆದರ ಏರಿಕೆ ವಿರುದ್ಧ ಅನೇಕ ವಿದ್ಯಾರ್ಥಿ ಯುವಜನರ ಒಟ್ಟಿಗೆ ರೈಲುಗಳನ್ನು ತಡೆದು ಬಂಧನಕ್ಕೊಳಗಾದರು.

1984 ಫೆಬ್ರವರಿ 16 ರಂದು ಪಕ್ಷಾಂತರ ವಿರೋಧಿ ಪ್ರತಿಭಟನಾ ಮೆರವಣಿಗೆ ಬಹಿರಂಗ ಸಭೆಯಲ್ಲಿ ಸುಮಾರು 3,000 ವಿದ್ಯಾರ್ಥಿ ಯುವಜನರು ಭಾಗವಹಿಸಿದ್ದರು.

ಸೌಹಾರ್ದ ಕಾರ್ಯಾಚರಣೆ ಅಂಗವಾಗಿ ಫೆಬ್ರವರಿ 13 ರಂದು 19 ವಿರೋಧ ಪಕ್ಷಗಳ ಕರೆಯಮೇರೆಗೆ ಬೆಲೆ ಏರಿಕೆ ವಿರೋಧಿ ಚಳುವಳಿ, NTR ಸರ್ಕಾರ ವಜಾ ಮಾಡಿದ ವಿರುದ್ಧ ಕನಿಷ್ಠ ಕೂಲಿಗೆ ಒತ್ತಾಯಿಸಿ, ಕರ್ನಾಟಕ ಬಂದ್, ಭಾರತ್ ಬಂದ್ ನಿರುದ್ಯೋಗ ವಿರೋಧಿ ದಿನಾಚರಣೆ,ಕಂಪ್ಯೂಟರ್ ವಿರೋಧಿ ದಿನಾಚರಣೆ, ಲೋಕಸಭಾ, ವಿಧಾನಸಭಾ ಚುನಾವಣೆಗಳಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೆ SFI ಸಕ್ರೀಯ ಬೆಂಬಲ ನೀಡಿದೆ.

ತುಮಕೂರಿನಲ್ಲಿ ವರದಕ್ಷಿಣೆ ಪಿಡುಗಿನ ವಿರುದ್ಧ SFI ಹೋರಾಟ ನಡೆಸಿತು. ಕುದುರೆಮೋತಿ ಪ್ರಕರಣವನ್ನು ಬಲಿಗೆಳೆಯುವಲ್ಲಿ SFI ಸಕ್ರೀಯವಾಗಿ ಕೆಲಸ ನಿರ್ವಹಿಸಿ. ರಾಯಚೂರಿನಲ್ಲಿ ನಡೆದ ಸಮಾವೇಶದಲ್ಲಿ ಶೇಕಡ 60 ರಷ್ಟುವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯು.ಜಿ.ಸಿ. ಶಿಫಾರಸ್ಸಿನ ವಿ.ವಿ.ಗೆ ಸ್ವಾಯತ್ತತೆ ವಿರುದ್ಧ ಮಂಗಳೂರಿನಲ್ಲಿ SFI ನೇತೃತ್ವದಲ್ಲಿ ನಡೆದ ಹೋರಾಟವೂ ವಿ.ವಿ. ಮಟ್ಟದಲ್ಲಿ ನಡೆಸಿದ ಮಹತ್ವ ಪೂರ್ಣ ಹೋರಾಟವಾಗಿದೆ. ಹೀಗೆ ಹಲವಾರು ಜಿಲ್ಲೆಗಳಲ್ಲಿ ಸಕ್ರಿಯವಾಗಿ SFI ಘಟಕಗಳು ಭಾಗವಹಿಸುತ್ತಿವೆ.

ಕರ್ನಾಟಕದಲ್ಲಿ ನೆಲದಲ್ಲಿ SFI ಹಲವಾರು ಜಿಲ್ಲೆಗಳಲ್ಲಿ ವಿದ್ಯಾರ್ಥಿ ಸಮುದಾಯದಲ್ಲಿ ಸೃಜನಶೀಲ ಹೋರಾಟದ ಪರಂಪರೆಯನ್ನು ಹೊಂದಿ ಪ್ರಗತಿಯ ಹಾದಿಯತ್ತ, ಬೆಳೆದ ಪೈರಾಗಿ, ಬೆಳೆಯುವ ಸಿರಿಮೊಳಕೆಯಲ್ಲಿ, ಹದವಾದ ನೆಲದಲ್ಲಿ ಕುಡಿಯೊಡೆದಿರುವ ಕವಲಾಗಿ ಹಬ್ಬುತ್ತಿದೆ. ಕರ್ನಾಟಕದ ವಿದ್ಯಾರ್ಥಿ ಸಮುದಾಯದಲ್ಲಿ ಒಳ್ಳೆ ಭವಿಷ್ಯತ್ತನ್ನೂ ಹೊಂದಿ ಆಶಾಕಿರಣವಾಗಿ ನಿರಂತರವಾಗಿ ಸಂಘಟನೆ ಹಬ್ಬುತ್ತಿದೆ. ನಮ್ಮ ಗುರಿಯನ್ನು ತಲುಪಲು ಅಸಂಘಟಿತ ವಿದ್ಯಾರ್ಥಿ ಸಮುದಾಯವನ್ನು ಸಂಘಟನೆಯಡಿ ತರಲು ನಾವೆಲ್ಲರೂ ಸರ್ವರೀತಿಯಿಂದಲೂ ದುಡಿಯಬೇಕಾಗಿದೆ.

○

ಎಸ್. ಎಫ್. ಐ. 6ನೇ ರಾಷ್ಟ್ರ ಸಮ್ಮೇಳನಕ್ಕೆ ಮುನ್ನಡೆಯಿರಿ.

ಆಂಧ್ರ ಪ್ರದೇಶದ ವಿಜಯವಾಡಾದಲ್ಲಿ 1986 ಡಿಸೆಂಬರ್ 11 ರಿಂದ 15, ರವರೆಗೆ ನಡೆಯಲಿರುವ ಎಸ್. ಎಫ್. ಐ 6 ನೆಯ ಅಖಿಲ ಭಾರತ ಸಮ್ಮೇಳನವು ಸಂಘಟನೆಯ ಸರ್ವತೋಮುಖ ಬೆಳವಣಿಗೆಯ ಪ್ರತೀಕವಾಗಿದೆ. ಹೋರಾಟ ರೂಪಿಸುವ ಶಕ್ತಿಯ ಸಂಕೇತವಾಗಿ ಪ್ರಭಾವ ಮತ್ತು ಹೋರಾಟದ ಪ್ರತಿಬಿಂಬವಾಗಿ ಮೂಡಿ ಬರಲಿದೆ. ಸದಸ್ಯತ್ವದ ಬೆಳವಣಿಗೆಯಲ್ಲಿ ನಾವು ಇದನ್ನು ಗುರುತಿಸಬಹುದು. 1970 ರ ಸ್ಥಾಪನಾ ಸಮ್ಮೇಳನದ ಸಂದರ್ಭದಲ್ಲಿ 1 ಲಕ್ಷದ 23 ಸಾವಿರದಷ್ಟಿದ್ದ ಸದಸ್ಯತ್ವ ಈಗ ಹದಿನೈದು ಲಕ್ಷದಷ್ಟು ಹೆಚ್ಚಾಗಿದೆ. ಈ ಮೂಲಕ ರಾಷ್ಟ್ರ ಪ್ರಜಾಪ್ರಭುತ್ವವಾದೀ ಚಿಂತನೆಯ ವಿದ್ಯಾರ್ಥಿ ಸಮುದಾಯದ ಅತ್ಯಂತ ದೊಡ್ಡ ಸಂಘಟನೆಯಾಗಿ ಹೊರಹೊಮ್ಮಿದೆ.

ಸಂಘಟಿತ ವಿದ್ಯಾರ್ಥಿ ಚಳುವಳಿಯ 50 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆಯುತ್ತಿರುವ ಈ ಸಮ್ಮೇಳನವು ಅತ್ಯಂತ ಮಹತ್ವವನ್ನು ಪಡೆದಿದೆ. 1936 ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ.ಐ.ಎಸ್.ಎಫ್.) ಸ್ಥಾಪಿಸುವಾಗ ಇದ್ದಂತಹ ಕಣ್ಣೋಟ, ವಿದ್ಯಾಮಾನಗಳು ಇಂದಿಗೂ ಕೂಡ ತನ್ನ ಮಹತ್ವವನ್ನು ಉಳಿಸಿಕೊಂಡಿವೆ. ದೇಶದ ಹಾಗೂ ಜನತೆಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಐಕ್ಯತೆ ರಕ್ಷಣೆಗಾಗಿ ಹುತಾತ್ಮರಾದ ನೂರಾರು ಸಂಗಾತಿಗಳು ಇಂದಿಗೂ ಕೂಡ ತಮ್ಮ ಅಮೂಲ್ಯವಾದ ಕಾಣಿಕೆಯ ಮೂಲಕ ಸಂಘಟನೆಯ ಮುನ್ನಡೆಗೆ ಸ್ಫೂರ್ತಿ ಚೇತನ ನೀಡುತ್ತಿದ್ದಾರೆ.

ರಾಷ್ಟ್ರಾದ್ಯಂತ ಪಸರಿಸಿದ್ದು ಹದಿನೈದು ಲಕ್ಷದಷ್ಟಿರುವ ಸದಸ್ಯರು ಹಾಗೂ ಅವರು ಇನ್ನಷ್ಟು ಲಕ್ಷಾಂತರ ವಿದ್ಯಾರ್ಥಿಗಳ ಮೇಲೆ ಹೊಂದಿರುವ ಪ್ರಭಾವವು ಜಾಗತಿಕ ಶಾಂತಿ, ಐಕ್ಯತೆ ಹಾಗೂ ರಾಷ್ಟ್ರೀಯ ಸಮಗ್ರತೆಗಾಗಿ ನಡೆಯುತ್ತಿರುವ ಹೋರಾಟದ ಮುಖ್ಯ ಭಾಗವಾಗಿದೆ. ನ್ಯಾಯ ಪರ, ಪ್ರಜಾಸತ್ತಾತ್ಮಕ ಮತ್ತು ವೈಜ್ಞಾನಿಕ ಶಿಕ್ಷಣ ಪದ್ಧತಿಗಾಗಿ ಹಾಗೂ ಭಾರತದ ಪ್ರಜಾಸತ್ತಾತ್ಮಕ ದೇಶಪ್ರೇಮಿ ಜನರೊಂದಿಗೆ ಬೆರೆತು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಹೋರಾಟ ನಡೆಸುತ್ತಿದೆ.

ಜಗತ್ತಿನ ವಿವಿಧ ಭಾಗಗಳಿಂದ ಅಲ್ಲಿನ ವಿದ್ಯಾರ್ಥಿ ಸಂಘಟನೆಗಳ ಸೌಹಾರ್ದ ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಗಿದೆ. ಅನೇಕರು ಈಗಾಗಲೇ ಆಹ್ವಾನವನ್ನು ಅಂಗೀಕರಿಸಿ ಇದರಲ್ಲಿ ಗಮನಿಯವಾದುದೆಂದರೆ ನಿಕಾರಾಗುವ ವಿದ್ಯಾರ್ಥಿಗಳ ರಾಷ್ಟ್ರೀಯ ಒಕ್ಕೂಟ (ಎನ್.ಯು.ಎಸ್.) ವು ಪ್ರಮುಖವಾದುದು. ವಿದೇಶಿ ಪ್ರತಿನಿಧಿಗಳ ಭಾಗವಹಿಸುವಿಕೆಯು ಭಾರತದಲ್ಲಿ ಪ್ರಜಾಪ್ರಭುತ್ವವಾದೀ ವಿದ್ಯಾರ್ಥಿ ಚಳುವಳಿಯಲ್ಲಿ ಎಸ್.ಎಫ್.ಐ. ವಹಿಸುತ್ತಿರುವ ಪ್ರಮುಖ ಪಾತ್ರದ ಸಂಕೇತವಾಗಿದೆ.

(8 ನೇ ಪುಟ ನೋಡಿ)

ಲೋಕ ಸಭೆಯಲ್ಲಿ ಪ್ರತಿಭಟನೆ

(1ನೇ ಪುಟದಿಂದ)

ಸರಕಾರದ ಮೇಲೆ ವಾಗ್ದಾಳಿ. "ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪಂಜಾಬ್‌ಗೆ ಎಲ್ಲಾ ನೆರವನ್ನೂ ನೀಡಿದೆ ಎಂದು ಅನೇಕ ಬಾರಿ ಆಶ್ವಾಸನೆ ನೀಡಿದ ಗೃಹಮಂತ್ರಿ ಬೂಟಾಸಿಂಗರ ಮೇಲೆ ಕಾಂಗ್ರೆಸ್ (ಐ) ಪಕ್ಷದ ವರಿಂದಲೆ ಥಾಳಿ, ಅವರ ರಾಜೀನಾಮೆಗೆ ಒತ್ತಾಯ. ಪಂಸತ್‌ಗೆ ವಿರೋಧವಾಗಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ ಮಂತ್ರಿ ಆರಿಫ್ ಮೊಹಮ್ಮದ್ ಖಾನ್‌ರವರಿಂದ ತನ್ನ ಪಕ್ಷದ ಸರಕಾರದ ಮೇಲೆ ವಾಗ್ದಾಳಿ "ಮತಾಂಧ ಶಕ್ತಿಗಳಿಗೆ ನೀಡಿದ ಪ್ರೋತ್ಸಾಹದಿಂದಾಗಿ ದೇಶ ದುಬಾರಿ ಬೆಲೆಯನ್ನು ತೆರುತ್ತಿದೆ ಇತಿಹಾಸದಿಂದ ಪಾಠ ಕಲಿಯಲು ನಿರಾಕರಿಸುವ ದೇಶಗಳು ಮತ್ತೆ ಅದೇ ದುರ್ಘಟನೆಗಳನ್ನು ಮತ್ತೆ ಮತ್ತೆ ನೋಡಬೇಕಾಗುತ್ತದೆ."

ಸಿ.ಪಿ.ಐ.(ಎಂ)ನ ಸೈಫುದ್ದೀನ್ ಚೌಧುರಿಯವರು, ಇದು ಬುಟಾಸಿಂಗ್ ಎಂಬ ಒಬ್ಬ ವ್ಯಕ್ತಿಯ ಜವಾಬ್ದಾರಿಯ ಪ್ರಶ್ನೆಯಲ್ಲ. ಇಡೀ ಕೇಂದ್ರ ಸರಕಾರದ ಜವಾಬ್ದಾರಿಯ ಪ್ರಶ್ನೆ ಕೇಂದ್ರ ಸರ್ಕಾರ ಪಂಜಾಬ್ ಒಪ್ಪಂದವನ್ನು ಜಾರಿಗೆ ತರಲು ಹಿಂದೇಟು ಹಾಕುತ್ತಿರುವ ಪ್ರಶ್ನೆ" ಎಂದರು.

ಕೇಂದ್ರ ಸರಕಾರದ ಅಧಿಕಾರ ದಾಹ

ಪಂಜಾಬ್ ಒಪ್ಪಂದವನ್ನು ಪೂರ್ಣವಾಗಿ ಜಾರಿಗೆ ತಂದ ಪಂಜಾಬ್‌ನಲ್ಲಿ ಎಲ್ಲಾ ಜನತೆಯ ಬೇಡಿಕೆಯಾದ ಚಂಡೀಘಡವನ್ನು ರಾಜ್ಯಕ್ಕೆ ವರ್ಗಾಯಿಸುವ, ನದಿ ನೀರಿನ ಹಂಚಿಕೆಯ ಪ್ರಶ್ನೆಯನ್ನು ಬಗೆಹರಿಸುವ ಪ್ರಯತ್ನ ಕೇಂದ್ರ ಸರಕಾರ ಮಾಡುತ್ತಿಲ್ಲ ಇದು ಭಯೋತ್ಪಾದಕರಿಗೆ ಆಧಾರವನ್ನೊದಗಿಸುವಂತಾಗಿದೆ. ಜನರನಡುವೆ ಸರಾಗವಾಗಿ ಓಡಾಡಲು ಅವಕಾಶ ಕೊಟ್ಟಿದೆ. ಒಪ್ಪಂದವನ್ನು ಕೂಡಲೆ ಜಾರಿಗೆ ತರುವುದಕ್ಕೆ ಬದಲಾಗಿ ಕೇಂದ್ರ ಸರಕಾರ ಪ್ರತಿ ಘಟನೆಯನ್ನು ಉಪಯೋಗಿಸಿಕೊಂಡು ಒಂದೊಂದು ತೀವ್ರ ಕಾನೂನನ್ನು ಪ್ರಜಾಸತ್ತೆಗೆ ವಿರೋಧವಾದ ನಿಯಮಗಳನ್ನು ಜಾರಿಗೆ ತಂದು ತನ್ನ ಅಧಿಕಾರವನ್ನು ಬಲಪಡಿಸಿಕೊಳ್ಳಲು ಯತ್ನಿಸುತ್ತಿದೆ. ಗಲಭೆ ಪೀಡಿತ ಪ್ರದೇಶಗಳ ಕಾನೂನು ಬಂತು, ಭಯೋತ್ಪಾದನೆಯ ವಿರುದ್ಧದ ಕಾನೂನು ಬಂತು, ತರಾತುರಿಯಲ್ಲಿ ಲೋಕಸಭೆಯಲ್ಲಿ ಪಾಸುಮಾಡಿಸಿಕೊಂಡ ಈ ಕಾನೂನುಗಳೂ ಸಾಲದೆಂಬಂತೆ ಈಗ ಕೇಂದ್ರ ಸರಕಾರವೇ ರಾಜ್ಯ ಸರಕಾರಗಳ ಅಧಿಕಾರ ವಲಯದಲ್ಲಿ ಮಧ್ಯ ಪ್ರವೇಶ ಮಾಡಿ ನೇರ ಕಾನೂನು ಪಾಲನೆಗೆ ಕೈಹಾಕುವ ಅಧಿಕಾರಬೇಕಂತೆ ಆಗ ಮಾತ್ರ ಎಲ್ಲವೂ ಸುವ್ಯವಸ್ಥಿತವಾಗುತ್ತದಂತೆ. ಏಕೆ? ಇದೇ ಪಂಜಾಬ್ ರಾಜ್ಯದಲ್ಲಿ ರಾಷ್ಟ್ರಪತಿಗಳ ಆಡಳಿತದ ಮೂಲಕ ಕೇಂದ್ರ ಸರಕಾರವೇ ಆಡಳಿತ ನಡೆಸುತ್ತಿದ್ದಾಗ ಏನು ಸಾಧನೆ ಮಾಡಿತು. ? ಮುಂದೆ ಎದ್ದು ಬರುವ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಬಗ್ಗು ಬಡಿಯಲು ಎಲ್ಲ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಳ್ಳಲು ಅಧಿಕಾರ ದಾಹದಿಂದ ತಹ ತಹಿಸುತ್ತಿದೆ ಕೇಂದ್ರ ಸರಕಾರ. ಈ ಅಧಿಕಾರದ ದಾಹವೇ ಭಯೋತ್ಪಾದಕರು, ವಿಚ್ಛಿದ್ರಕಾರಿಗಳು ಬೆಳೆಯಲು ಫಲವತ್ತಾದ ಭೂಮಿಯನ್ನೊದಗಿಸಿದೆ.

O

ಶಾಸಕ ವೆಂಕಟ್ರಾಮಯ್ಯನವರ ಮನವಿ

ದಕ್ಷಿಣ ಕೊಡಗಿನ ವಿರಾಜ ಪೇಟೆ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶದಲ್ಲಿ ಆರ್. ಎಸ್. ಎಸ್. ಮತ್ತು ಸ್ಥಳೀಯ ಗೂಂಡಾ ಜನರು ಬಟ್ಟಳ ಮತ್ತು ಕೇರಳದಿಂದ ಬಂದ ಮಾಪಿಳ್ಳೆ ಜನರ ಮೇಲೆ ಅತ್ಯಾಚಾರ ನಡೆಸುತ್ತಿದ್ದಾರೆಂದೂ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಹೆಂಗಸರ ಕೂದಲು–ಸೆರಗು ಎಳೆಯುವುದು. ಚಿವುಟುವುದು, ಉರಿಯುವ ಸಿಗರೇಟ್ ಮೈಗೆ ಹಚ್ಚುವಂಥ ದುಷ್ಕೃತ್ಯದಲ್ಲಿ ಕೊಡಗಿರುವುದರಿಂದ ಬಸ್ಸಿನಲ್ಲಿ ಪ್ರಯಾಣ ಮಾಡುವುದೇ ಅಸಾಧ್ಯವಾಗಿದೆಂದೂ ಕಳೆದ 25–30 ವರ್ಷಗಳಿಂದಲೂ ವಿರಾಜ ಪೇಟೆ ತಾಲೂಕಿನಲ್ಲಿ ನೆಲೆಸಿರುವ ನೂರಾರು ಮಾಪಿಳ್ಳೆ ಮನೆತನದವರನ್ನು ಬೆದರಿಸಿ ಹೊರ ಹಾಕಿದ ಕಾರಣ ಅವರೆಲ್ಲ ಕುಟ್ಟಾ ಗ್ರಾಮದ ಮಸೀದಿ, ಬೀದಿಗಳಲ್ಲಿ ನಿರ್ಗತಿಕರಾಗಿರುವ ಪರಿಸ್ಥಿತಿ ಉಂಟಾಗಿದೆಂದೂ, ಸಿ. ಪಿ. ಐ. (ಎಂ) ಶಾಸಕ ಆರ್. ವೆಂಕಟ್ರಾಮಯ್ಯನವರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ನಿಜಾಮುದ್ದೀನ್ ಅವರಿಗೆ ತಿಳಿಸಿ, ಜನರಿಗೆ ರಕ್ಷಣೆ ನೀಡಲು ವಿರಾಜ ಪೇಟೆಗೆ ಹೆಚ್ಚಿನ ಪೋಲೀಸರನ್ನು ಕಳುಹಿಸಬೇಕೆಂದು ಕೇಳಿಕೊಂಡಿದ್ದಾರೆ. ಸಮಾಜ ದ್ರೋಹಿಗಳಿಗೆ ಹೆದರಿ ಪೋಲೀಸರು ಕೂಡ ಏನೂ ಕ್ರಮ ತೆಗೆದು ಕೊಳ್ಳುತ್ತಿಲ್ಲವೆಂದೂ, ಅತ್ಯಾಚಾರ ಮಾಡಿದ ಗೂಂಡಾ ಜನರನ್ನು ಬಂಧಿಸಿಲ್ಲೆಂದೂ ಕ್ರಮ ಕೈಗೊಳ್ಳದಿದ್ದರೆ, ಗೂಂಡಾ ಜನರನ್ನೆದುರಿಸಲು ಸಿ. ಪಿ. ಐ. (ಎಂ) ಪಕ್ಷ, ಕಾರ್ಮಿಕರ ಸಂಘ ಮತ್ತು ಸಾರ್ವಜನಿಕರು ತಕ್ಕ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದೇನೆಂದೂ ಪೋಲೀಸ್ ಅಧಿಕಾರಿಗಳಿಗೆ ಹೇಳಿದ್ದಾರೆ. ನವಂಬರ್ 30 ರಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವ ಸಲುವಾಗಿ ವೆಂಕಟ್ರಾಮಯ್ಯನವರು ವಿರಾಜ ಪೇಟೆಗೆ ಹೋಗಿದ್ದರು. ಪ್ರತಿಬಂಧಕಾಜ್ಞೆಯಿಂದಾಗಿ ಸಭೆ ನಡೆಯಲಿಲ್ಲ. ವಿರಾಜ ಪೇಟೆಯಿಂದ ಕುಟ್ಟದವರೆಗೂ ಪ್ರಯಾಣ ಮಾಡಿದ ಶಾಸಕರು ದಬ್ಬಾಳಿಕೆಗೊಳಗಾದ ಜನರಿಗೆಲ್ಲ ಭೆಟ್ಟಿಯಾಗಿ, ಅವರ ಕಷ್ಟಗಳನ್ನು ಕೇಳಿ ಗುಂಡಾಗಿರಿಯನ್ನು ಧೈರ್ಯದಿಂದ ಎದುರಿಸಬೇಕೆಂದು ತಂತಮ್ಮ ಮನೆಗಳಿಗೆ ಹಿಂತಿರುಗಬೇಕೆಂದೂ ಧೈರ್ಯ ಹೇಳಿದ್ದಾರೆ.

ಬೀಡಿ ಒಕ್ಕೂಟದ ಸಂವಿಧಾನ ಅಂಗೀಕಾರ

ಕಾಂ. ಸೂರಿ ಅಧ್ಯಕ್ಷರು

ಕಾಂ ದಸ್ತಗೀರ್ ಪ್ರ. ಕಾರ್ಯದರ್ಶಿ

ರಾಜ್ಯದ ಬೀಡಿ ಕಾರ್ಮಿಕರ 5ನೇ ರಾಜ್ಯ ಸಮ್ಮೇಳನವು 1986 ನವೆಂಬರ್ 22 ರಿಂದ 24ರ ವರೆಗೆ ನಡೆದು, ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಘಟನೆಯನ್ನು ಬಲಪಡಿಸಲು ಕೆಲವು ಮುಖ್ಯ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಈ ಸಮ್ಮೇಳನವು 'ರಾಜ್ಯದ ಬೀಡಿ ಕಾರ್ಮಿಕರ ಒಕ್ಕೂಟ'ದ ನಡವಳಿಕೆಗಾಗಿ ಒಂದು ಸಂವಿಧಾನವನ್ನು ರಚಿಸಿ ಅದನ್ನು ಅಂಗೀಕರಿಸಲಾಗಿದೆ.

ಈ ಘಟನೆಯ ಪ್ರಕಾರ ಸಮ್ಮೇಳನದಲ್ಲಿ 80 ಸದಸ್ಯರನ್ನುಳ್ಳ ಒಂದು ರಾಜ್ಯ ಮಂಡಳಿಯನ್ನೂ, ಮತ್ತು 40 ಸದಸ್ಯರುಳ್ಳ ಒಂದು ರಾಜ್ಯ ಸಮಿತಿಯನ್ನೂ ಆರಿಸಲಾಯಿತು. ಈ ರಾಜ್ಯ ಸಮಿತಿಯಲ್ಲಿ 11 ಸದಸ್ಯರುಳ್ಳ ಪದಾಧಿಕಾರಿಗಳನ್ನೂ ಆರಿಸಲಾಯಿತು.

1.	ಕಾಂ. ಎಸ್. ಸೂರ್ಯನಾರಾಯಣ ರಾವ್	—	ಅಧ್ಯಕ್ಷರು.
2.	ಕಾಂ. ಪಿ. ರಾಮಚಂದ್ರ ರಾವ್	—	ಉಪಾಧ್ಯಕ್ಷರು
3.	ಕಾಂ. ವಿ. ಜೆ. ಕೆ. ನಾಯರ್	—	"
4.	ಕಾಂ. ಕೆ. ಆರ್. ಶ್ರೀಯಾನ್	—	"
5.	ಕಾಂ. ಕೆ. ಮೂಸಬ್ಬ	—	"
6.	ಕಾಂ. ಮಹಮ್ಮದ್ ದಸ್ತಗೀರ್	—	ಪ್ರಧಾನ ಕಾರ್ಯದರ್ಶಿ
7.	ಕಾಂ. ಯು. ಬಿ. ಲೋಕಯ್ಯ	—	ಕಾರ್ಯದರ್ಶಿ
8.	ಕಾಂ. ಪದ್ಮಾವತಿ	—	"
9.	ಕಾಂ. ಕೈರುನ್ನೀಸಾ	—	"
10.	ಕಾಂ. ಉರಾಬಿ	—	"
11.	ಕಾಂ. ಕೆ. ಶಂಕರ್	—	ಕೋಶಾಧ್ಯಕ್ಷರು

6ನೇ ರಾಷ್ಟ್ರ ಸಮ್ಮೇಳನಕ್ಕೆ ಮುನ್ನಡೆಯಿರಿ

(7 ನೇ ಪುಟದಿಂದ)

ಸಮ್ಮೇಳನ ಸಂಘಟಿಸುತ್ತಿರುವ ಆಂಧ್ರ ಪ್ರದೇಶದ ಎಲ್ಲಾ ಭಾಗಗಳಲ್ಲೂ ಸಾಧ್ಯವಿರುವ ಎಲ್ಲಾ ಪ್ರಚಾರ ಮಾಧ್ಯಮಗಳ ಮೂಲಕ ಸಮ್ಮೇಳನಕ್ಕೆ ವ್ಯಾಪಕ ಪ್ರಚಾರ ನೀಡಲಾಗಿದೆ. ಎಸ್.ಎಫ್.ಐ. ಕೇಂದ್ರ ಸಮಿತಿ ಸ್ವತಃ ವಿಸ್ತೃತವಾಗಿ ಸಮ್ಮೇಳನದ ಬಗ್ಗೆ ರಾಷ್ಟ್ರದಾದ್ಯಂತ ಪ್ರಚಾರ ನಡೆಸಿದೆ.

ಪ್ರಜಾಪ್ರಭುತ್ವವಾದೀ ಚಳುವಳಿಯ 22 ಪ್ರಮುಖ ಕಾರ್ಯಕರ್ತರನ್ನು ಬಲಿತೆಗೆದುಕೊಂಡಿರುವ "ಗೂರ್ಖಾ ರಾಷ್ಟ್ರೀಯ ವಿಮೋಚನ ವಿರೋಧಿ" ಚಳುವಳಿಯ ವಿರುದ್ಧ ಪಶ್ಚಿಮ ಬಂಗಾಳದ ಎಸ್. ಎಫ್. ಐ. ಘಟಕವು ನಡೆಸುತ್ತಿರುವ ಧೀಮಂತ ಹೋರಾಟಕ್ಕೆ ಅಖಿಲ ಭರತ ರೂಪ ನೀಡಲು ಕೇಂದ್ರ ಸಮಿತಿ ನಿರ್ಧರಿಸಿದೆ.

ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ, ಪಂಜಾಬ್, ಹರಿಯಾಣ ಮೊದಲಾದ ಪ್ರದೇಶಗಳಲ್ಲಿ ವಿಚ್ಛಿದ್ರಕಾರೀಶಕ್ತಿಗಳ ವಿರುದ್ಧ ಎಸ್.ಎಫ್.ಐಯು ಇತರ ಪ್ರಜಾಪ್ರಭುತ್ವವಾದೀ ಸಂಘಟನೆಯೊಂದಿಗೆ ಸೇರಿ ಧೀಮಂತ ಹೋರಾಟ ನಡೆಸುತ್ತಿದೆ. ಇಲ್ಲಿನ ಸಂಗಾತಿಗಳು ಮಾಡಿರುವ ಅಪಾರ ತ್ಯಾಗ, ಬಲಿದಾನ ಈ ಸಮ್ಮೇಳನದ ಯಶಸ್ವಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. ಹೊಸ ಶಿಕ್ಷಣ ನೀತಿಯ ವಿರುದ್ಧ ಎಸ್.ಎಫ್.ಐ. ನಡೆಸುತ್ತಿರುವ ಹೋರಾಟದಿಂದ ವಿಶಾಲವಾದ ವಿದ್ಯಾರ್ಥಿ ಸಮುದಾಯದ ನಡುವೆ ಪ್ರಭಾವ ಬೆಳೆಸಲು ಸಾಧ್ಯವಾಗಿದೆ. ಮಾತ್ರವಲ್ಲ ಇತರ ವಿದ್ಯಾರ್ಥಿಸಂಘಟನೆಗಳ ಪ್ರಭಾವದಿಂದ ನಮ್ಮೆಡೆಗೆ ಆಕರ್ಷಿಸಲು ಸಾಧ್ಯವಾಗಿದೆ. ಬುದ್ಧಿ ಜೀವಿ ವರ್ಗ ಮತ್ತು ಶಿಕ್ಷಕ ಸಮುದಾಯದ ನಡುವೆ ವ್ಯಾಪಕ ಪ್ರಭಾವ ಬೆಳೆಸಲು ಸಾಧ್ಯವಾಗಿದೆ. ಸಮ್ಮೇಳನದ ಉದ್ದೇಶಗಳು ವ್ಯಾಪಕ ಪ್ರಚಾರವು ಮುಂಬರುವ ದಿನಗಳಲ್ಲಿ ಗುಣಾತ್ಮಕವಾಗಿ ನಮ್ಮ ಪ್ರಭಾವವನ್ನು ವೃದ್ಧಿಸಲಿದೆ. ಹಾಗೂ ಈ ಮೂಲಕ ರಾಷ್ಟ್ರದಲ್ಲಿ ಪ್ರಜಾಸತ್ತಾತ್ಮಕ ಹಾಗೂ ದೇಶ ಪ್ರೇಮಿ ಶಕ್ತಿಗಳ ಬಲವರ್ಧನೆ ಮಾಡಲಿದೆ.

—ಕಾಂ|| ಸೀತಾರಾಮ್ ಯೆಚುರಿ.
SFI–ಅಖಿಲ ಭಾರತ ಅಧ್ಯಕ್ಷರು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya